# ಉಪನಿರ್ದೇಶಕರ ಕಛೇರಿ ಮಂಡ್ಯ ಜಿಲ್ಲೆ ಮಂಡ್ಯ

# ಸಫಲ

## ಸಮಾಜ ವಿಜ್ಞಾನ ಪ್ರಶ್ನೋತ್ತರ ಕೋಠಿ

ಮಾರ್ಗದರ್ಶನ ; ಶ್ರೀ ಶಿವಮಾದಪ್ಪ

**ಉಪನಿರ್ದೇಶಕರು ಆಡಳಿತ**

**ಮಂಡ್ಯ ಜಿಲ್ಲೆ ಮಂಡ್ಯ**

ಸಲಹೆ ಮತ್ತು ಸಹಕಾರ : ಶ್ರೀಮತಿ ಲಕ್ಷ್ಮಿ ಟಿ ವಿಷಯ ಪರಿವೀಕ್ಷಕರು

ಸಮಾಜ ವಿಜ್ಞಾನ **ಉಪನಿರ್ದೇಶಕರ ಕಛೇರಿ**

**ಮಂಡ್ಯ ಜಿಲ್ಲೆ ಮಂಡ್ಯ**

ರಚನೆ : ಸವಿ ಬಳಗ **ಮಂಡ್ಯ**

SAVI BALAGA MANDYA

# ಇತಿಹಾಸ

## ಅಧ್ಯಾಯ–1. ಭಾರತಕ್ಕೆ ಯೂರೋಪಿಯನ್ನರ ಆಗಮನ (2 ಅಂಕಗಳು)

**ಒಂದು ಅಂಕದ ಪ್ರಶ್ನೆಗಳು.**

1 17ನೇ ಶತಮಾನದವರೆಗೆ ಅರಬಿಯನ್ ಸಮುದ್ರದ ಮೇಲೆ ವ್ಯಾಪಾರಿ ಏಕಸ್ವಾಮ್ಯವನ್ನು ಹೊಂದಿದವರು ಯಾರು? * ಪೋರ್ಚುಗೀಸರು

2 ಫ್ರೆಂಚರ ಅವನತಿಗೆ ಕಾರಣವಾದ ಕದನ ಯಾವುದು? * ವಾಂಡಿವಾಷ್ ಕದನ

3 ಫ್ರೆಂಚರನ್ನು ವಾಂಡಿವಾಷ್ ಕದನದಲ್ಲಿ ಸೋಲಿಸಿದ ಇಂಗ್ಲಿಷ್ ಸೈನ್ಯಾಧಿಕಾರಿ ಯಾರು? * ಸರ್ ಐರ್ ಕೂಟ

4 ಪ್ಲಾಸಿ ಕದನದಲ್ಲಿ ಇಂಗ್ಲೀಷ್ ಸೇನೆಯ ನೇತೃತ್ವವಹಿಸಿದವರು ಯಾರು? * ರಾಬರ್ಟ್ ಕ್ಲೈವ್

5. ಬಂಗಾಳದಲ್ಲಿ ದ್ವಿಮುಖ ಸರ್ಕಾರವನ್ನು ಜಾರಿಗೆ ತಂದವರು ಯಾರು? * ರಾಬರ್ಟ್ ಕ್ಲೈವ್

6. ಭಾರತಕ್ಕೆ ಹೊಸ ಜಲಮಾರ್ಗವನ್ನು ಕಂಡುಹಿಡಿದ ಪೋರ್ಚುಗೀಸ್ ನಾವಿಕ ಯಾರು * ವಾಸ್ಕೋಡಿಗಾಮ

7. ವಾಸ್ಕೋಡಗಾಮ ಭಾರತದ ಕಲ್ಲಿಕೋಟೆಗೆ ಬಂದು ತಲುಪಿದ ವರ್ಷ ಯಾವುದು? * ಕ್ರಿ.ಶ. 1498

8. ಕಲ್ಕತ್ತ ಸಮೀಪ ಕೆಲವು ಹಳ್ಳಿಗಳನ್ನು ಬ್ರಿಟೀಷರಿಗೆ ದತ್ತಿಯಾಗಿ ನೀಡಿದ ಮೊಘಲ್ ಚಕ್ರವರ್ತಿ ಯಾರು? * ಫರೂಕ್ ಷಿಯಾರ

9. ಮೊದಲ ಕರ್ನಾಟಿಕ್ ಯುದ್ಧದ ಸಂದರ್ಭದಲ್ಲಿದ್ದ ಕರ್ನಾಟಿಕ್ ದ ನವಾಬ ಯಾರು? * ಅನ್ವರುದ್ದೀನ್

10. ಕರ್ನಾಟಿಕ್ ಯುದ್ದಗಳ ಸಂದರ್ಭದಲ್ಲಿ ಫ್ರೆಂಚರ ನಾಯಕತ್ವವನ್ನು ವಹಿಸಿದ್ದವನು ಯಾರು? * ಡೂಪ್ಲೆ

11. ಸಿರಾಜುದ್ದೌಲನ ನಂತರ ಅಥವಾ ಪ್ಲಾಸಿ ಕದನದ ನಂತರ ಬಂಗಾಳದ ನವಾಬನಾದವನು ಯಾರು? * ಮೀರ್ ಜಾಫರ್

12. ಮೀರ್ ಕಾಸಿಂನ ತ್ರಿಮೈತ್ರಿ ಕೂಟದಲ್ಲಿದ್ದ ಔದ್‌ನ ನವಾಬ ಯಾರು? * ಷೂಜ್ ಉದ್ದೌಲ

13. ಬಕ್ಸಾರ್ ಕದನ ನಡೆದ ವರ್ಷ ಯಾವುದು? * ಕ್ರಿ.ಶ. 1764

14. ಮೆಡಿಟೇರಿಯನ್ ಹಾಗು ಯೂರೋಪಿನ ವ್ಯಾಪಾರವು ಯಾವ ದೇಶದ ಏಕಸ್ವಾಮ್ಯತೆಗೆ ಒಳಪಟ್ಟಿತ್ತು? * ಇಟಲಿ

15. ಸಿರಾಜ್–ಉದ್–ದೌಲನು ಯಾವ ಪ್ರಾಂತ್ಯದ ನವಾಬನಾಗಿದ್ದನು? * ಬಂಗಾಳ

16. ಬಂಗಾಳ ಪ್ರಾಂತ್ಯದಲ್ಲಿ ಬ್ರಿಟೀಷರಿಗೆ ದಿವಾನಿ ಹಕ್ಕನ್ನು ನೀಡಿದವರು ಯಾರು? * ಷಾ ಆಲಂ

17. ಕರ್ನಾಟಿಕ್ ಯುದ್ದಗಳು ಯಾರ ನಡುವೆ ನಡೆದವು? * ಬ್ರಿಟೀಷರು ಮತ್ತು ಫ್ರೆಂಚರು

18. ಹೊಸ ಭೂಪ್ರದೇಶಗಳನ್ನು ಅನ್ವೇಷಿಸಲು ಅಥವಾ ಸಮುದ್ರ ಯಾನಕ್ಕೆ ಪ್ರೋತ್ಸಾಹಿಸಿದ ರಾಷ್ಟ್ರಗಳು ಯಾವುವು? * ಸ್ಪೇನ್ ಮತ್ತು ಪೋರ್ಚುಗಲ್

19. ಮಧ್ಯಯುಗದಲ್ಲಿ ಭಾರತದ ಸಾಂಭಾರ ಪದಾರ್ಥಗಳು ಹೆಚ್ಚಾಗಿ ರಫ್ತಾಗುತ್ತಿದ್ದ ಯೂರೋಪಿನ ಸಾಮ್ರಾಜ್ಯಗಳು ಯಾವುವು? * ಗ್ರೀಕ್ ಮತ್ತು ರೋಮ್.

20. ಪಶ್ಚಿಮ ಯುರೋಪಿನ ರಾಷ್ಟ್ರಗಳು ಪರ್ಯಾಯ ವ್ಯಾಪಾರ ಮಾರ್ಗಗಳನ್ನು ಹುಡುಕಲು ಪ್ರಮುಖ ಕಾರಣವೇನು? * ಇಟಲಿಯ ಏಕಸ್ವಾಮ್ಯವನ್ನು ಮುರಿಯಲು

21. ಬ್ರಿಟಿಷರು ಭಾರತದಲ್ಲಿ ಮೊದಲು ವಶಪಡಿಸಿಕೊಂಡ ಮೊದಲ ರಾಜ್ಯ ಯಾವುದು? * ಬಂಗಾಳ

22. ಭಾರತದಲ್ಲಿ ಅಧಿಪತ್ಯ ಸ್ಥಾಪಿಸಲು ದೇಶಿಯ ಸಂಸ್ಥಾನಗಳ ರಾಜಕೀಯದಲ್ಲಿ ಹಸ್ತಕ್ಷೇಪ ಮಾಡಿದವರು ಯಾರು? * ಬ್ರಿಟಿಷರು ಮತ್ತು ಫ್ರೆಂಚರು

23. ಯೂರೋಪಿನಲ್ಲಿ ಭಾರತದ ಯಾವ ವಸ್ತುಗಳಿಗೆ ಹೆಚ್ಚಿನ ಬೇಡಿಕೆ ಇತ್ತು? * ಮೆಣಸು, ದಾಲ್ಚಿನ್ನಿ , ಏಲಕ್ಕಿ, ಶುಂಠಿ, ಇತ್ಯಾದಿ

24. ಮೀರ್ ಖಾಸ್ಸಿಂನನ್ನು ಬಂಗಾಳದ ನವಾಬನನ್ನಾಗಿ ಮಾಡಿದ್ದರಿಂದ ಅವನು ಬ್ರಿಟೀಷರಿಗೆ ಬಳುವಳಿಯಾಗಿ ನೀಡಿದ ಪ್ರದೇಶಗಳಾವುವು?
* ಬರ್ದವಾನ್, ಮಿಡ್ನಾಪುರ, ಚಿತ್ತಗಾಂಗ್

25. ಪ್ಲಾಸಿ ಕದನವು ಯಾವಾಗ? ಯಾರಯಾರ ನಡುವೆ ನಡೆಯಿತು * ಕ್ರಿ.ಶ.1757 ಜೂನ್ 23

26. ಮದ್ಯಯುಗದಲ್ಲಿ ಯೂರೋಪು ಮತ್ತು ಏಷ್ಯಾಖಂಡಗಳ ನಡುವಿನ ವ್ಯಾಪಾರವು ಯಾವ ಮಾರ್ಗಗಳ ಮೂಲಕ ನಡೆಯುತ್ತಿತ್ತು?
* ಪರ್ಶಿಯನ್ ಕೊಲ್ಲಿ , ಕೆಂಪು ಸಮುದ್ರ, ಮೆಡಿಟೇರಿಯನ್ ಸಮುದ್ರಗಳ ಮೂಲಕ

27. ನೌಕಾಯಾನದಲ್ಲಿ ನಾವಿಕರಿಗೆ ಸಹಾಯಕವಾದ ವೈಜ್ಞಾನಿಕ ಸಲಕರಣೆಗಳಾವುವು?
* ದಿಕ್ಸೂಚಿ, ಸಿಡಿಮದ್ದು, ನೌಕಾ ಉಪಕರಣಗಳು, ಭೂಪಟಗಳು, ಇತ್ಯಾದಿ.

28. ಬ್ರಿಟೀಷರು 24 ಪರಗಣಗಳ ಮೇಲಿನ ಜವಾಬ್ದಾರಿ ಹಕ್ಕನ್ನು ಹೇಗೆ ಪಡೆದರು?
* ಪ್ಲಾಸಿ ಕದನದ ನಂತರ ಮೀರ್ ಜಾಫರನ್ನು ಬಂಗಾಳದ ನವಾಬನನ್ನಾಗಿ ನೇಮಿಸಿ, ಪ್ರತಿಯಾಗಿ ಅವನಿಂದ 24 ಪರಗಣದ ಜವಾಬ್ದಾರಿ ಹಕ್ಕನ್ನು ಪಡೆದರು

**.ಎರಡು ಅಂಕಗಳ ಪ್ರಶ್ನೆಗಳು.**

1. ಸಮುದ್ರಯಾನಕ್ಕೆ ವೈಜ್ಞಾನಿಕ ಬೆಳವಣಿಗೆಯು ಕಾರಣ ಈ ಹೇಳಿಕೆಯನ್ನು ಸಮರ್ಥಿಸಿ.

   - ಜ್ಞಾನ ಪುನರುಜ್ಜೀವನ ಕಾಲದಲ್ಲಿ ಯೂರೊಪಿನಲ್ಲಿ ನಡೆದ ಅನೇಕ ವೈಜ್ಞಾನಿಕ ಸಂಶೋಧನೆಗಳು ಹೊಸ ಸಮುದ್ರ ಮಾರ್ಗಗಳ ಆವಿಷ್ಕಾರಕ್ಕೆ ಕಾರಣವಾದವು. ಇವುಗಳಲ್ಲಿ ಪ್ರಮುಖವಾದವುಗಳೆಂದರೆ, ವೈಜ್ಞಾನಿಕ ಸಲಕರಣೆಗಳಾದ ದಿಕ್ಸೂಚಿ, ಗ್ರಹೋನ್ನತಿ ಮಾಪಕ, ಸಿಡಿಮದ್ದು, ಭೂಪಟಗಳು ಇತ್ಯಾದಿಗಳು ಹೊಸ ಜಲಮಾರ್ಗಗಳನ್ನು ಕಂಡುಹಿಡಿಯಲು ನಾವಿಕರಿಗೆ ಸಹಾಯಕವಾದವು.



SAVI BALAGA MANDYA

2. ಭಾರತಕ್ಕೆ ಹೊಸ ಜಲಮಾರ್ಗಗಳನ್ನು ಕಂಡುಹಿಡಿಯಲು ಪ್ರೇರಕವಾದ ಅಂಶಗಳು ಯಾವುವು?

- ವೈಜ್ಞಾನಿಕ ಸಲಕರಣೆಗಳಾದ ದಿಕ್ಸೂಚಿ, ಗ್ರಹೋನ್ನತಿ ಮಾಪಕ, ಸಿಡಿಮದ್ದು, ಭೂಪಟಗಳು ಇತ್ಯಾದಿಗಳು
- ಪೂರ್ವ ರಾಷ್ಟ್ರಗಳ ಸಂಪತ್ತಿನ ಬಗ್ಗೆ ಹೇಳಲಾಗುತ್ತಿದ್ದ ಕಥೆಗಳು.
- ಧರ್ಮ ಪ್ರಚಾರಕ್ಕಾಗಿ ಉತ್ಸುಕರಾಗಿದ್ದ ಮಿಷನರಿಗಳು

3. ಪಶ್ಚಿಮ ಯುರೋಪಿನ ದೇಶಗಳು ಭಾರತಕ್ಕೆ ಪರ್ಯಾಯ ವ್ಯಾಪಾರ ಮಾರ್ಗವನ್ನು ಕಂಡುಹಿಡಿಯುವ ಪ್ರಯತ್ನಕ್ಕೆ ಕಾರಣಗಳೇನು?

- ಮಧ್ಯ ಯುಗದಲ್ಲಿ ಮೆಡಿಟೇರಿಯನ್ ಹಾಗೂ ಯೂರೋಪಿನ ವ್ಯಾಪಾರವು ಇಟಲಿಯ ಏಕಸ್ವಾಮ್ಯಕ್ಕೆ ಒಳಪಟ್ಟಿತ್ತು.
- ಕ್ರಿ.ಶ. 1400 ರ ಹೊತ್ತಿಗೆ ಈ ವ್ಯಾಪಾರವು ಅತ್ಯಂತ ಲಾಭದಾಯಕವಾಗಿತ್ತು.
- ಇಟಲಿಯ ಏಕಸ್ವಾಮ್ಯವನ್ನು ಮುರಿಯಲು ಪಶ್ಚಿಮ ಯೂರೋಪಿಯನ್ ದೇಶಗಳು ಭಾರತಕ್ಕೆ ಒಂದು ಪರ್ಯಾಯ ವ್ಯಾಪಾರ ಮಾರ್ಗವನ್ನು ಹುಡುಕಲು ಪ್ರಯತ್ನಿಸಿದರು.
- ಸ್ಪೇನ್ ಮತ್ತು ಪೋರ್ಚುಗಲ್ ಮತ್ತು ಯುರೋಪಿನ ಇತರ ದೇಶಗಳು ಹೊಸ ಭೂಪ್ರದೇಶಗಳನ್ನು ಹುಡುಕುವ ನಾವಿಕರಿಗೆ ಪ್ರೋತ್ಸಾಹ ನೀಡಿದವು.

4. ಯೂರೊಪಿಯನ್ನರಿಗೆ ಭಾರತದ ಸಾಂಬಾರ ಪದಾರ್ಥಗಳು ಬಹಳ ಪ್ರಿಯವಾಗಿದ್ದವು ಎಂಬುದನ್ನು ಹೇಗೆ ಹೇಳುವಿರಿ?

ಯುರೋಪಿಯನ್ನರಿಗೆ ಭಾರತದ ಸಾಂಬಾರ ಪದಾರ್ಥಗಳು ಬಹಳ ಪ್ರಿಯವಾಗಿದ್ದವು ಹೇಗೆಂದರೆ,

- ಪ್ರಾಚೀನ ಕಾಲದಿಂದಲೂ ಭಾರತ ಹಾಗು ಯೂರೋಪಿನ ಮಧ್ಯೆ ವಾಣಿಜ್ಯ ಸಂಬಂಧಗಳು ಬೆಸೆದುಕೊಂಡಿದ್ದವು
- ಪ್ರಮುಖವಾಗಿ ಭಾರತದ ಸಾಂಬಾರ ಪದಾರ್ಥಗಳಾದ ಮೆಣಸು , ದಾಲ್ಚಿನ್ನಿ ಏಲಕ್ಕಿ , ಶುಂಠಿ ಇತ್ಯಾದಿ ವಸ್ತುಗಳಿಗೆ ಯುರೋಪಿನ ಜನರಿಂದ ಯಥೆಚ್ಚ ಬೇಡಿಕೆ ಇತ್ತು.
- ಈ ವಸ್ತುಗಳನ್ನು ಯೂರೋಪಿನ ಗ್ರೀಕ್ ಮತ್ತು ರೊಮನ್ ಸಾಮ್ರಾಜ್ಯಗಳಿಗೆ ರಫ್ತು ಮಾಡಲಾಗುತ್ತಿತ್ತು.

5. ಕರ್ನಾಟಿಕ್ ಯುದ್ಧಗಳು ಇಂಗ್ಲೀಷರು ಭಾರತದಲ್ಲಿ ನೆಲೆಯೂರಲು ಹೇಗೆ ಸಹಾಯಕವಾದವು ಎಂಬುದನ್ನು ವಿವರಿಸಿ

- ಮೊದಲನೇ ಕರ್ನಾಟಿಕ್ ಯುದ್ದದಲ್ಲಿ ಬ್ರಿಟೀಷರು ಸೋತರು, ಮದ್ರಾಸ್ ಒಪ್ಪಂದದಿಂದ ಫ್ರೆಂಚರು ಮದ್ರಾಸ್‌ನ್ನು ಇಂಗ್ಲೀಷರಿಗೆ ಬಿಟ್ಟುಕೊಟ್ಟರು.
- ಎರಡನೇ ಕರ್ನಾಟಿಕ್ ಯುದ್ದದಲ್ಲಿ ಫ್ರೆಂಚರ ಬೆಂಬಲಿತ ಚಂದಾಸಾಹೇಬನನ್ನು ಬ್ರಿಟಿಷರು ತಿರುಚನಾಪಳ್ಳಿಯಲ್ಲಿ ಕೊಂದು ಆರ್ಕಾಟನ್ನು ತಮ್ಮ ವಶಕ್ಕೆ ತೆಗೆದುಕೊಂಡರು.
- ಮೂರನೇ ಕರ್ನಾಟಿಕ್ ಯುದ್ದದ ವಾಂಡಿವಾಷ್ ಕದನದಲ್ಲಿ ಬ್ರಿಟಿಷರು ಫ್ರೇಂಚರನ್ನು ಸಂಪೂರ್ಣವಾಗಿ ಸೊಲಿಸಿ ಭಾರತದಲ್ಲಿ ತಮ್ಮ ನೆಲೆಯನ್ನು ಭದ್ರಪಡಿಸಿಕೊಂಡರು.

6. ಎರಡನೇ ಕರ್ನಾಟಿಕ್ ಯುದ್ಧದಿಂದ ಇಂಗ್ಲೀಷರು ಮತ್ತು ಫ್ರೆಂಚರು ಪ್ರಬಲರಾದರು ಹೇಗೆ ಸಮರ್ಥಿಸಿ.

- ಹೈದರಾಬಾದ್ & ಕರ್ನಾಟಿಕ್ ಪ್ರದೇಶಗಳಲ್ಲಿ ನವಾಬನ ಪದವಿಗಾಗಿ ಪೈಪೋಟಿ ಏರ್ಪಟ್ಟಿತ್ತು
- ಕರ್ನಾಟಿಕ್ ನಲ್ಲಿ ಇಂಗ್ಲೀಷರು ಅನ್ವರುದ್ದೀನನಿಗೆ , ಫ್ರೆಂಚರು ಚಂದಾಸಾಹೇಬನನಿಗೆ ಬೆಂಬಲ ನೀಡಿದ್ದರು
- ರಾಬರ್ಟ್ ಕ್ಲೈವನು ತಿರುಚನಾಪಳ್ಳಿಯ ಮೇಲೆ ದಾಳಿಮಾಡಿ ಚಂದಸಾಹೇಬನನ್ನು ಕೊಂದು ಅದನ್ನು ವಶಪಡಿಸಿಕೊಂಡನು. ಇದರಿಂದ ಕರ್ನಾಟಿಕ್‌ದಲ್ಲಿ ಬ್ರಿಟೀಷರು ಪ್ರಾಬಲ್ಯ ಸ್ಥಾಪಿಸಿದರು.
- ಹೈದರಾಬಾದಿನಲ್ಲಿ ಇಂಗ್ಲೀಷರ ಬೆಂಬಲಿಗ ನಾಸೀರ್ ಜಂಗನ್ನು ಫ್ರೆಂಚರು ಸೊಲಿಸಿ ಹೈದರಾಬಾದನ್ನು ವಶಪಡಿಸಿಕೊಂಡರು. ಇಲ್ಲಿ ಫ್ರೆಂಚರು ಪ್ರಾಬಲ್ಯ ಸ್ಥಾಪಿಸಿದರು.

7. ಮೂರನೇ ಕರ್ನಾಟಿಕ್ ಯುದ್ದದ ಪರಿಣಾಮಗಳೇನು?

- ಮೂರನೇ ಕರ್ನಾಟಿಕ್ ಯುದ್ದವು ಬ್ರೀಟೀಷರ ಮತ್ತು ಫ್ರೆಂಚರ ನಡುವೆ ನಡೆಯಿತು.
- ಈ ಯುದ್ದದಲ್ಲಿ ಫ್ರೆಂಚರು ಸಂಪೂರ್ಣವಾಗಿ ಸೋತರು.
- ಪ್ಯಾರಿಸ್ ಒಪ್ಪಂದದ ಪ್ರಕಾರ ಫ್ರೆಂಚರಿಗೆ ಬ್ರೀಟೀಷರು ವಶಪಡಿಸಿಕೊಂಡ ಪ್ರದೇಶಗಳನ್ನು ಹಿಂದಿರುಗಿಸಿದರು.
- ಫ್ರೆಂಚರು ಕೋಟೆಗಳನ್ನು ಕಟ್ಟಿ ರಕ್ಷಿಸಿಕೊಳ್ಳುವಂತಿರಲಿಲ್ಲ. ಅವು ಕೇವಲ ವ್ಯಾಪಾರಿ ಕೇಂದ್ರವಾಗಿಯಷ್ಟೇ ಕಾರ್ಯನಿರ್ವಹಿಸಬೇಕಿತ್ತು .

SAVI BALAGA MANDYA

8. ಭಾರತದಲ್ಲಿ ಬ್ರಿಟೀಷರು ಸಾಮ್ರಾಜ್ಯದ ಒಡೆಯರಾಗಲು ಅವರ ರಾಜಕೀಯ ಮುತ್ಸದ್ಧಿತನ ಮತ್ತು ಕುಟಿಲತೆಯೆ ಕಾರಣ. ಈ ಹೇಳಿಕೆಯನ್ನು ಸಮರ್ಥಿಸಿ.

- ಬ್ರೀಟೀಷ್ ವ್ಯಾಪಾರಿಗಳು ಸಾಮ್ರಾಜ್ಯದೊಡೆಯರಾದ್ದು ಕೇವಲ ಸೈನ್ಯ ಬಲದಿಂದಲ್ಲ. ಬದಲಿಗೆ ರಾಜಕೀಯ ಮುತ್ಸದೀತನ ಮತ್ತು ಕುಟಿಲತೆಯನ್ನು ಉಪಯೋಗಿಸಿದರು. ಹೇಗೆಂದರೆ ಭಾರತೀಯ ರಾಜರಲಿದ್ದ ಅನೈಕ್ಯತೆ ಮತ್ತು ಆಂತರಿಕ ಕಲಹಗಳನ್ನು ಉಪಯೋಗಿಸಿ ಒಬ್ಬೊಬ್ಬರ ಮೇಲೆ ಒಬ್ಬೊಬ್ಬರನ್ನು ಮೇಲೆತ್ತಿ ಅವರಲ್ಲಿಯೇ ಒಡಕನ್ನುಂಟುಮಾಡಿ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿಕೊಂಡರು.

9. ಪ್ಲಾಸಿ ಕದನದ ಫಲಿತಾಂಶಗಳೇನು? ಅಥವಾ ಪರಿಣಾಮಗಳೇನು?

- ಸಿರಾಜುದ್ದೌಲ್‌ನು ಕದನದಲ್ಲಿ ಕೊಲ್ಲಲ್ಪಟ್ಟನು.
- ಬ್ರಿಟಿಷರೊಂದಿಗೆ ಸಹಕರಿಸಿದ್ದ ಮೀರ್ ಜಾಫರ್ ನನ್ನು ಬಂಗಾಳದ ನವಾಬನ್ನಾ ಗಿ ನೇಮಿಸಿದರು.
- ಬ್ರಿಟಿಷರು ಮೀರ್ ಜಾಫರ್‌ನನಿಂದ 24 ಪರಗಣಗಳ ಜಮಿನ್ದಾರಿ ಹಕ್ಕನ್ನು ಪಡೆದುಕೊಂಡು ಅತ್ಯಂತ ಪ್ರಬಲರಾದರು.

10. ಬಕ್ಸಾರ್ ಕದನಕ್ಕೆ ಕಾರಣಗಳೇನು?

- ಇಂಗ್ಲೀಷರ ಹಿಡಿತದಿಂದ ಹೊರಬರಲು ಮೀರ್ ಕಾಸಿಂ ಪ್ರಯತ್ನಿಸಿದಾಗ ಬ್ರಿಟೀಷರು ಅವನನ್ನು ಪದಚ್ಯುತಿಗೊಳಿಸಿ ಮೀರ್ ಜಾಫರ್‌ನನ್ನು ಮತ್ತೆ ಬಂಗಾಳದ ನವಾಬನ್ನಾಗಿ ಮಾಡಿದರು.
- ಮೀರ್ ಕಾಸಿಂ ಮೊಘಲ್ ಚಕ್ರವರ್ತಿ ಷಾ ಆಲಂ ಔದ್‌ನ ನವಾಬ ಷೂಜ ಉದ್ದೌಲನೊಡನೆ ತ್ರಿಮೈತ್ರಿ ಕೂಟ ಒಪ್ಪಂದ ಮಾಡಿಕೊಂಡು ಬ್ರಿಟೀಷರ ವಿರುದ್ಧ 1764 ರಲ್ಲಿ ದಾಳಿ ಮಾಡಿದನು.

11. ಬಕ್ಸಾರ್ ಕದನದ ಪರಿಣಾಮಗಳೇನು?

- ಈ ಯುದ್ದದಲ್ಲಿ ಮಿರ್ ಕಾಸಿಂ ನ ಒಕ್ಕೂಟ ಸೈನ್ಯ ಸೋಲು ಅನುಭವಿಸಿತು.
- ಈ ಕದನದ ಪರಿಣಾಮವಾಗಿ ಬಿಹಾರ ಒರಿಸ್ಸಾ ಮತ್ತು ಬಂಗಾಳ ಪ್ರಾಂತ್ಯಗಳು ಇಂಗ್ಲೀಷರ ವಶವಾದವು.
- ರಾಬರ್ಟ್‌ಕ್ಲೈವನು ಬಂಗಾಳದಲ್ಲಿ ದ್ವಿಸರ್ಕಾರವನ್ನು ಜಾರಿಗೆ ತಂದನು.
- ಮೊಘಲ್ ಚಕ್ರವರ್ತಿ ಷಾ ಆಲಂ ದಿವಾನಿ ಹಕ್ಕನ್ನು ಇಂಗ್ಲೀಷರಿಗೆ ನೀಡಿದನು.

12. ದ್ವಿ–ಸರ್ಕಾರ ಪದ್ದತಿಯನ್ನು ವಿವರಿಸಿ. ಅಥವಾ ಬ್ರಿಟಿಷರಿಗೆ ಭಾರತದಲ್ಲಿ ಭದ್ರವಾಗಿ ನೆಲೆಯೂರಲು ದ್ವಿ–ಸರ್ಕಾರ ಪದ್ದತಿಯು ನೆರವಾಯಿತು ಹೇಗೆ ಸಮರ್ಥಿಸಿರಿ.

- 1765 ರಲ್ಲಿ ರಾಬರ್ಟ್‌ಕ್ಲೈವನು, ಬಂಗಾಳದಲ್ಲಿ ದ್ವಿ–ಸರ್ಕಾರ ಪದ್ದತಿಯನ್ನು ಜಾರಿಗೆ ತಂದನು
- ಇಂಗ್ಲೀಷರು ದಿವಾನಿ ಹಕ್ಕಿನಿಂದಾಗಿ ಭೂಕಂದಾಯವನ್ನು ವಸೂಲಿಮಾಡುವ ಅಧಿಕಾರ ಪಡೆದರು
- ಆಡಳಿತ , ನ್ಯಾಯಪ್ರತಿಪಾದನೆ , ಮೊದಲಾದ ಆಡಳಿತಾತ್ಮಕ ಕಾರ್ಯಗಳನ್ನು ನವಾಬನು ನಿರ್ವಹಿಸುತ್ತಿದ್ದನು. ಇದನ್ನೆ ದ್ವಿ ಸರ್ಕಾರವೆಂದು ಕರೆಯಲಾಗಿದೆ.
- ಹೀಗೆ ಬ್ರೀಟೀಷರಿಗೆ ಭಾರತದಲ್ಲಿ ಭದ್ರವಾಗಿ ನೆಲೆಯೂರಲು ದ್ವಿ ಸರ್ಕಾರ ಪದ್ದತಿಯು ನೆರವಾಯಿತು.

## <u>ಅಧ್ಯಾಯ–2. ವಸಾಹತು ಆಳ್ವಿಕೆಯಲ್ಲಿ ಕನ್ನಡ ಮಾತನಾಡುವ ಪ್ರದೇಶಗಳು (2 ಅಂಕಗಳು)</u>

**ಒಂದು ಅಂಕದ ಪ್ರಶ್ನೆಗಳು.**

- ಮೈಸೂರಿನಲ್ಲಿ ಒಡೆಯರ ಆಳ್ವಿಕೆ ಆರಂಭವಾದುದ್ದು ಯಾರ ಕಾಲದಲ್ಲಿ ? * ಯದುರಾಯ– ಕೃಷ್ಣರಾಯ
- ಮೈಸೂರು ರಾಜ್ಯದ ಕೊನೆಯ ಅರಸ ಯಾರು?‘ * ಜಯಚಾಮರಾಜ ಒಡೆಯರ್
- ಮೂರನೇ ಮೈಸೂರು ಆಂಗ್ಲೋ ಯುದ್ದಕ್ಕೆ ತಕ್ಷಣದ ಕಾರಣವೇನು? * ಟಿಪ್ಪು ತಿರುವಾಂಕೂರಿನ ರಾಜನ ಮೇಲೆ ದಾಳಿ ಮಾಡಿದುದ್ದು.
- ಮೊದಲನೇ ಆಂಗ್ಲೋ– ಮೈಸೂರು ಯುದ್ದ ಈ ಒಪಂದದಿಂದ ಕೊನೆಗೊಂಡಿತು? * ಮದ್ರಾಸ್ ಶಾಂತಿ ಒಪ್ಪಂದ
- ಕ್ರಿ.ಶ. 1781 ರಲ್ಲಿ ಹೈದರಾಲಿಯನ್ನು ಸೋಲಿಸಿದ ಬ್ರಿಟೀಷ್ ಸೇನಾಧಿಕಾರಿ ಯಾರು? * ಸರ್ ಐರ್ ಕೂಟ್
- ಮದ್ರಾಸ್ ಶಾಂತಿ ಒಪ್ಪಂದದ ಷರತ್ತು ಯಾವುದು?
  * ಮೂರನೇ ಶಕ್ತಿಯಿಂದ ಆಕ್ರಮಣವಾದಾಗ ಬ್ರಿಟೀಷರು ಮತ್ತು ಹೈದರಾಲಿ ಪರಸ್ಪರ ಸಹಾಯ ಮಾಡುವುದು.
- ಎರಡನೇ ಆಂಗ್ಲೋ ಮೈಸೂರು ಯುದ್ದವು ಯಾವ ಒಪ್ಪಂದದಿಂದ ಕೊನೆಗೊಂಡಿತು? ಮಂಗಳೂರು ಶಾಂತಿ ಒಪ್ಪಂದ
- ಫ್ರೆಂಚರ ವಸಾಹತು ಯಾವುದು? * ಮಾಹೆ



SAVI BALAGA MANDYA

- 8 ಶತಮಾನಗಳ ಕಾಲ ಕೊಡಗನ್ನು ಆಳಿದವರು ಯಾರು? * ಚಂಗಾಳ್ವರು
- ಮುರನೇ ಆಂಗ್ಲೋ–ಮೈಸೂರು ಯುದ್ಧವು ಯಾವ ಒಪ್ಪಂದದೊಂದಿಗೆ ಕೊನೆಗೊಂಡಿತು? * ಶ್ರೀರಂಗಪಟ್ಟಣ ಒಪ್ಪಂದ
- ನಾಲ್ಕನೇ ಆಂಗ್ಲೋ–ಮೈಸೂರು ಯುದ್ಧದ ಅವಧಿಯಲ್ಲಿದ್ದ ಬ್ರಿಟೀಷ್ ಗವರ್ನರ್ ಜನರಲ್ ಯಾರು? * ಲಾರ್ಡ್ ವೆಲ್ಲೆಸ್ಲಿ.
- ಲಾರ್ಡ್ ವೆಲ್ಲೆಸ್ಲಿ ಜಾರಿಗೆ ತಂದ ನೀತಿ ಯಾವುದು? * ಸಹಾಯಕ ಸೈನ್ಯ ಪದ್ಧತಿ
- ಟಿಪ್ಪು ಸುಲ್ತಾನ್ ಮರಣ ಹೊಂದಿದ ವರ್ಷ ಯಾವುದು? * ಕ್ರಿ.ಶ.1799
- ರಾಜ ಒಡೆಯರ ಕಾಲದಲ್ಲಿ ಮೈಸೂರು ರಾಜ್ಯದ ರಾಜಧಾನಿ ಯಾವುದು? * ಶ್ರೀರಂಗಪಟ್ಟಣ
- ಮೈಸೂರು ರಾಜ್ಯವು ರಾಮರಾಜ್ಯ ಎಂಬ ಕೀರ್ತಿ ಪಡೆದುದ್ದು ಯಾವ ಒಡೆಯರ ಕಾಲದಲ್ಲಿ? * ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ.

**ಎರಡು ಅಂಕದ ಪ್ರಶ್ನೆಗಳು**

1. ಮದ್ರಾಸ್ ಶಾಂತಿ ಒಪ್ಪಂದದ ಷರತ್ತುಗಳೇನು?
   - ಗೆದ್ದ ಪ್ರದೇಶಗಳನ್ನು ಪರಸ್ಪರ ಹಿಂದಿರುಗಿಸುವುದು.
   - ಮೂರನೇ ಶಕ್ತಿಯಿಂದ ಆಕ್ರಮಣವಾದಾಗ ಪರಸ್ಪರ ಸಹಾಯ ಮಾಡುವುದು.
2. ಮೂರನೇ ಆಂಗ್ಲೋ ಮೈಸೂರು ಯುದ್ಧದ ಫಲಿತಾಂಶಗಳೇನು?
   - ಟಿಪ್ಪು ಸೋಲನ್ನು ಅನುಬವಿಸಿದನು.
   - ಟಿಪ್ಪು ತನ್ನ ಅರ್ಧ ರಾಜ್ಯವನ್ನು ಬ್ರಿಟೀಷರಿಗೆ ನೀಡುವುದು.
   - ಪರಿಹಾರ ಹಣ ನೀಡುವವರೆಗೆ ತನ್ನ ಇಬ್ಬರು ಮಕ್ಕಳನ್ನು ಬ್ರಿಟೀಷರಿಗೆ ಒತ್ತೆಯಿಡಬೇಕಾಯಿತು.
3. ಎರಡನೇ ಮೈಸೂರು ಯುದ್ಧಕ್ಕೆ ಕಾರಣಗಳೇನು?
   - ಇಂಗ್ಲೀಷರು ಫ್ರೆಂಚರ ಮಾಹೆಯನ್ನು ವಶಪಡಿಸಿಕೊಂಡದ್ದು.
   - ಮರಾಠರು, ನಿಜಾಮರು– ಇಂಗ್ಲೀಷರೊಡನೆ ಕೈಜೋಡಿಸಿದರು.
4. ಹೈದರಾಬಾದ್ ಕರ್ನಾಟಕದ ಪ್ರದೇಶಗಳಾವುವು?
   - ಬೀದರ್, ಗುಲ್ಬರ್ಗ, ಯಾದಗಿರಿ, ಕೊಪ್ಪಳ, ಬಳ್ಳಾರಿ ರಾಯಚೂರು,
5. ಮುಂಬೈ ಪ್ರಾಂತ್ಯದ ಆಳ್ವಿಕೆಗೆ ಒಳಪಟ್ಟ ಪ್ರದೇಶಗಳಾವುವು?
   - ಬೆಳಗಾವಿ, ಬೀಜಾಪುರ, ಧಾರಾವಾಡ, ಉತ್ತರಕನ್ನಡ.
6. ಶ್ರೀರಂಗ ಪಟ್ಟಣ ಒಪ್ಪಂದವು ಟಿಪ್ಪುವಿಗೆ ಅನಿವಾರ್ಯವಾಗಿತ್ತು ವಿಮರ್ಶಿಸಿ.
   - ಟಿಪ್ಪುವಿಗೆ ಯಾವ ದೇಶೀಯ ಸಂಸ್ಥಾನಗಳ ನೆರವು ದೊರಕಲಿಲ್ಲ.
   - ಎರಡು ವರ್ಷಗಳ ದೀರ್ಘಕಾಲ ಹೋರಾಟದಿಂದ ಟಿಪ್ಪು ಬಳಲಿದ್ದನು.
   - ಮೂರನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಟಿಪ್ಪು ತೀವ್ರವಾಗಿ ಸೋಲನ್ನು ಅನುಭವಿಸಿದ್ದನು.
   - ಇಂಗ್ಲೀಷರು ಪ್ರಭಲರಾಗಿದ್ದರು.
7. ನಾಲ್ಕನೇ ಆಂಗ್ಲೋ ಮೈಸೂರು ಯುದ್ಧದ ಪರಿಣಾಮಗಳೇನು?
   - ಮೈಸೂರು ರಾಜ್ಯದ ಪ್ರದೇಶವನ್ನು ಬ್ರಿಟೀಷರು ಮತ್ತು ನಿಜಾಮರು ಹಂಚಿಕೊಂಡರು.
   - ಹಳೇ ಮೈಸೂರು ಭಾಗವನ್ನು ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಒಪ್ಪಿಸಲಾಯಿತು.
   - ಕೊಡಗಿನ ಪ್ರದೇಶಗಳನ್ನು ಕೊಡಗಿನ ರಾಜನಿಗೆ ನೀಡಲಾಯಿತು.
8. ಕೊಡಗಿನ ದಂಗೆಯಲ್ಲಿ ಗುಡ್ಡೆಮನೆ ಅಪ್ಪಯ್ಯಗೌಡರ ಪಾತ್ರವನ್ನು ವಿವರಿಸಿ.
   - ಕೊಡಗಿನಲ್ಲಿ ಅಪ್ಪಯ್ಯಗೌಡರು ಹೋರಾಟದ ನೇತೃತ್ವ ವಹಿಸಿಕೊಂಡಿದ್ದರು.
   - ಬ್ರೀಟೀಷರು ದಿವಾನರ ಮೂಲಕ ಹೋರಾಟ ಹತ್ತಿಕ್ಕಿದರು.
   - ಮದ್ರಾಸಿನಿಂದ ಬಂದ ಸೈನ್ಯ ಮಂಗಳೂರಿನಿಂದ ಹೋರಾಟಗಾರರನ್ನು ಹಿಮ್ಮೆಟ್ಟಿಸಿತು.
   - ಹೋರಾಟಗಾರರನ್ನು ಗಡಿಪಾರು ಮಾಡಲಾಯಿತು.

SAVI BALAGA MANDYA

9. ಸಹಾಯಕ ಸೈನ್ಯ ಪದ್ಧತಿಯ ಅರ್ಥ ತಿಳಿಸಿ?

- ಭಾರತಿಯ ದೊರೆಗಳ ಮೇಲೆ ನಿಯಂತ್ರಣ ಹಾಗೂ ಬ್ರೀಟೀಷ್ ಸಾಮ್ರಾಜ್ಯ ವಿಸ್ತರಣೆ.
- ದೇಶಿಯ ದೊರೆ ಬ್ರಿಟೀಷ್ ಸೇನೆಯ ತುಕಡಿ ಇಟ್ಟುಕೊಂಡು ನಿರ್ವಹಿಸುವುದು.
- ಒಪ್ಪಂದಕ್ಕೆ ಒಳಪಟ್ಟ ರಾಜ್ಯದಲ್ಲಿ ಬ್ರಿಟೀಷ್ ರೆಸಿಡೆಂಟನ ನೇಮಕ.
- ದೇಶಿಯ ದೋರೆಗಳ ಪರಸ್ಪರ ಆಂತರೀಕ ವ್ಯವಹಾರಗಳಲ್ಲಿ ಬ್ರೀಟೀಷರ ಹಸ್ತಕ್ಷೇಪ.

**ಅಧ್ಯಾಯ – 3. ಜಾನಪದ ಚರಿತ್ರೆ ( 1 ಅಂಕ)**

1. ಬ್ರಿಟೀಷರ ಆಗಮನದಿಂದ ಚರಿತ್ರೆಯ ಬರವಣಿಗೆಯ ಮೇಲಾದ ಪ್ರಭಾವಗಳೇನು?
    - ಬ್ರಿಟೀಷ್ ಚರಿತ್ರೆಕಾರರು ಯಾವುದೇ ಘಟನೆಗಳನ್ನು ನಿರೂಪಿಸುವಾಗ ಅದಕ್ಕೊಂದು ತಾತ್ವಿಕ ರೂಪ ಕೊಡಲು ಆರಂಭಿಸಿದರು. ಇದನ್ನು ಚರಿತ್ರೆ ಯೆಂದು ಅರ್ಥೈಸಲಾಯಿತು.
2. ಭಾರತವು ಹೆಚ್ಚು ಲಿಖಿತ ಇತಿಹಾಸ ಆಕರಗಳನ್ನು ಹೊಂದಿರಲಿಲ್ಲ. ಏಕೆ?
    - ಭಾರತ ದೇಶದ ಶೇ. 70 ಕ್ಕೂ ಹೆಚ್ಚಿನ  ಜನರಿಗೆ ಅಕ್ಷರ ಜ್ಞಾನ ವಿಲ್ಲದಿದ್ದರಿಂದ ಭಾರತವು ಹೆಚ್ಚು ಲಿಖಿತ ಇತಿಹಾಸ ಆಕರಗಳನ್ನು ಹೊಂದಿರಲಿಲ್ಲ.
3. ಕಾಲಚಕ್ರ ಎಂದರೇನು?
    - ಭಾರತೀಯ ಪರಂಪರೆಯಲ್ಲಿ ಚರಿತ್ರೆಯನ್ನು ಚಕ್ರೋಪಾಧಿಯಲ್ಲಿ ನೋಡುವುದನ್ನು ಕಾಲಚಕ್ರವೆಂದು ಕರೆಯುತ್ತಾರೆ.
4. ಚರಿತ್ರೆಕಾರರಿಗೆ ಮೌಖಿಕ ಚರಿತ್ರೆಯನ್ನು ರಚಿಸಲು ಸಹಾಯಕವಾದ ಅಂಶಗಳಾವುವು?
    - ಐತಿಹ್ಯ, ಲಾವಣಿ, ಜಾನಪದ ಗೀತೆ, ಕಾವ್ಯಗಳನ್ನು ಅಧ್ಯಾಯನ ಮಾಡುವ ಮೂಲಕ ಸಮಾಜದ ಸಂಪ್ರದಾಯ, ನಡಾವಳಿ ಇತ್ಯಾಧಿಗಳನ್ನು ಅಭ್ಯಾಸ ಮಾಡಿ ಚರಿತ್ರೆ ರಚಿಸಲು ಚರಿತ್ರೆಕಾರರಿಗೆ ಸಹಾಯಕವಾಗಿವೆ.
5. ಜಾನಪದ ಚರಿತ್ರೆ ಎಂದರೇನು? ಅಥವಾ ಮೌಖಿಕ ಚರಿತ್ರೆ ಎಂದರೇನು?
    - ಮೌಖಿಕ ಆಕರಗಳಾದ ಐತಿಹ್ಯ, ಲಾವಣಿ, ಜಾನಪದ ಗೀತೆ, ಕಾವ್ಯಗಳು ಸಮಾಜದ ಸಂಪ್ರದಾಯ ನಡಾವಳಿ ಇತ್ಯಾಧಿಗಳಿಂದ ರೂಪುಗೊಂಡ ಚರಿತ್ರೆಗಳನ್ನು ಜಾನಪದ ಅಥಾವಾ ಮೌಖಿಕ ಚರಿತ್ರೆಯೆಂದು ಕರೆಯುತ್ತಾರೆ.
6. ಚರಿತ್ರೆ ಬರವಣಿಗೆಯ ರೇಖಾತ್ಮಕ ಮಾದರಿಯನ್ನು ವಿವರಿಸಿ?
    - ಚರಿತ್ರೆಯಲ್ಲಿ ಒಂದನೇ ಇಸವಿಯ ನನಂತರ ಎರಡನೇ ಇಸವಿಯ ಘಟನೆ, 17ನೇ ಶತಮಾನದ ಘಟನೆಯ ನಂತರ 18ನೇ ಶತಮಾನದ ಘಟನೆ ಹೀಗೆ ಕಾಲಾನು ಕ್ರಮವಾಗಿ ಚರಿತ್ರೆ ಬರೆಯಲ್ಪಡುವುದನ್ನು ಚರಿತ್ರೆ ಬರವಣಿಗೆಯ ರೇಖಾತ್ಮಕ ಮಾದರಿಯೆನ್ನುವರು.
7. ಯುಗ ಎಂದರೇನು? ಉದಾ. ಕೊಡಿ.
    - ಒಂದು ಕಾಲಚಕ್ರದ ಆವರ್ತನ ಮುಗಿದ ಮೇಲೆ ಇನ್ನೋಂದು ಕಾಲಚಕ್ರದ ಆವರ್ತನ ಆರಂಭವಾಗುತ್ತದೆ. ಇದನ್ನು ಯುಗ ಎಂದು ಕರೆಯುತ್ತಾರೆ. ಉದಾ. ಕೃತಯುಗ.
8. ಭಾರತೀಯರು ಜಾನಪದ ಚರಿತ್ರೆಗೆ ಹೆಚ್ಚಿನ ಪ್ರಾಶ್ಚಸ್ತ್ಯನೀಡಿದ್ದರು. ಏಕೆ?
    - ದೇಶದ ಶೇ. 70 ಕ್ಕೂ ಹೆಚ್ಚಿನ  ಜನರಿಗೆ ಅಕ್ಷರ ಜ್ಞಾನ ವಿಲ್ಲದಿದ್ದರಿಂದ ಜಾನಪದ ಚರಿತ್ರೆಗೆ ಹೆಚ್ಚಿನ ಪ್ರಾಶ್ಚಸ್ತ್ಯನೀಡಿದ್ದರು.
    -
9. ಚರಿತ್ರೆಯನ್ನು ಕಣ್ಮುಚ್ಚಿ ಒಪ್ಪಿಕೊಳ್ಳಲು ಸಾಧ್ಯವಿಲ್ಲ ಏಕೆ?
    - ಆಧಾರಗಳೇ ಚರಿತ್ರೆಯ ಜೀವಾಳಗಳಾಗಿದ್ದು, ಆಧಾರಗಳಿಲ್ಲದ ಚರಿತ್ರೆಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ.
10. ಮೌಖಿಕ ಆಕಾರಗಳು ಜನಪದ ಆಕರಗಳು ಇಂದು ಚರಿತ್ರೆಕಾರರಿಗೆ ವರಪ್ರಸಾದವಾಗಿವೆ ಎಂದು ಹೇಗೆ ಹೇಳುವಿರಿ?
    - ಜನಪದ ಆಕರಗಳ ಮೂಲಕ ಗ್ರಾಮ ಗ್ರಾಮಗಳ ಚರಿತ್ರೆಯನ್ನು , ಪ್ರಾದೇಶಿಕ ಚರಿತ್ರೆಯನ್ನು , ರೈತಾಪಿ ಜನರ ಚರಿತ್ರೆಯನ್ನು ದಾಖಲಿಸುವ ಮೂಲಕ ಸ್ಥಳೀಯ ವಿವಿಧ ಮಜಲುಗಳನ್ನು ಅರ್ಥಮಾಡಿಕೊಳ್ಳಲು ಸುಲಭವಾಗುತ್ತದೆ. ಆದ್ದರಿಂದ ಜನಪದ ಆಕರಗಳು ಇಂದು ಚರಿತ್ರೆಕಾರರಿಗೆ ವರಪ್ರಸಾದವಾಗಿವೆ ಎಂದು ಹೇಳಬಹುದು.

SAVI BALAGA MANDYA

## ಅಧ್ಯಾಯ – 4. ಬ್ರಿಟೀಷ್ ಆಡಳಿತದ ಬುನಾದಿ ಹಾಗೂ ಅದರ ಪರಿಣಾಮಗಳು ( 1 ಅಂಕ)

1. ಎರಡನೇ ಆಂಗ್ಲೋ ಮರಾಠ ಯುದ್ದವು ಈ ಒಪ್ಪಂದದೊಂದಿಗೆ ಮುಕ್ತಾಯವಾಯಿತು? * ಬೆಸ್ಸಿನ್ ಒಪ್ಪಂದ
2. ಸರ್ವೋಚ್ಚನ್ಯಾಯಾಲಯದ ಸ್ಥಾಪನೆಗೆ ಅವಕಾಶ ಮಾಡಿಕೊಟ್ಟ ಶಾಸನ ಯಾವುದು? * 1773 ರ ರೆಗ್ಯೂಲೇಟಿಂಗ್ ಶಾಸನ
3. ಮತೀಯ ಆಧಾರದ ಮೇಲೆ ಚುನಾವಣೆಗೆ ಶೀಫಾರಸ್ಸು ಮಾಡಿದ ಶಾಸನ ಯಾವುದು? * 1909ರ ಶಾಸನ.
4. ಮೋದಲನೇ ಆಂಗ್ಲೋ ಮರಾಠ ಯುದ್ದವು ಈ ಒಪ್ಪಂದದೊಂದಿಗೆ ಮುಕ್ತಾಯವಾಯಿತು? * ಸಾಲ್ಬಾಯ್ ಒಪ್ಪಂದ
5. 'ಪಂಜಾಬಿನ ಸಿಂಹ' ಎಂದುಪ್ರಖ್ಯಾತಿ ಪಡೆದವರು ಯಾರು? * ರಣಜಿತ್ ಸಿಂಗ್
6. ರಣಜಿತ್ ಸಿಂಗ್ ನ ನಂತರ ಅಧಿಕಾರಕ್ಕೆ ಬಂದವರು ಯಾರು? * ದುಲೀಪ್ ಸಿಂಗ್.
7. ಸಿಖ್ ಸೈನ್ಯದ ಹೆಸರು ಯಾವುದು? * ಖಾಲ್ಸಾ.
8. ಭಾರತದ ಮೊದಲನೇ ಗೌರ್ನರ್ ಜನರಲ್ ಯಾರು? * ವಾರನ್ ಹೇಸ್ಟಿಂಗ್.
9. 1909ರ ಶಾಸನವನ್ನು ರೂಪಿಸಿದವರು ಯಾರು? * ವೈಸ್ ರಾಯ್ ಮಿಂಟೋ ಮತ್ತು ಕಾರ್ಯದರ್ಶಿ ಮಾರ್ಲೆ.
10. 1773ರ ರೆಗ್ಯೂಲೇಟಿಂಗ್ ಶಾಸನದ ಪ್ರಕಾರ ಸರ್ವೋಚ್ಚ ನ್ಯಾಯಾಲಯ ಎಲ್ಲಿ ಸ್ಥಾಪನೆಯಾಯಿತು? * ಕಲ್ಕತ್ತ.
11. ಪೇಶ್ವೆ ಎರಡನೇ ಬಾಜಿರಾಯ ಸಹಾಹಕ ಸೈನ್ಯ ಪದ್ಧತಿಯನ್ನು ಸ್ವೀಕರಿಸಿದ್ದು ಯಾವ ಒಪ್ಪಂದದ ಮೂಲಕ? * ಬೆಸ್ಸಿನ್ ಒಪ್ಪಂದ
12. 1919ರ ಭಾರತ ಸರ್ಕಾರದ ಶಾಸನವನ್ನು ರೂಪಿಸಿದವರು ಯಾರು? * ಮಾಂಟೆಗೋ ಮತ್ತು ಚೆಮ್ಸ್ ಫರ್ಡ್
13. ದುಲೀಪ್ ಸಿಂಗನ ಪ್ರಧಾನಿ ಯಾರು? * ಲಾಲ್ ಸಿಂಗ್.
14. ಭಾರತದ ಸಂವಿಧಾನ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿದ ಶಾಸನ ಯಾವುದು? * 1861 ರ ಶಾಸನ
15. ಸಹಾಯಕ ಸೈನ್ಯ ಪದ್ದತಿಯನ್ನು ಜಾರಿಗೆ ತಂದ ಬ್ರಿಟೀಷ್ ಗೌರ್ನರ್ ಯಾರು? * ಲಾರ್ಡ್ ವೆಲ್ಲೆಸ್ಲಿ.
16. ಭಾರತೀಯರಿಗೆ ಪ್ರಥಮ ಬಾರಿಗೆ ಶಾಸನೀಯ ಹಾಗೂ ಆಡಳಿತ ಕಾರ್ಯದಲ್ಲಿ ಪಾಲ್ಗೋಳ್ಳಲು ಅವಕಾಶ ಮಾಡಿಕೊಟ್ಟ ಶಾಸನ ಯಾವುದು? * 1861 ಇಂಡಿಯನ್ ಕೌನ್ಸಿಲ್ ಆಕ್ಟ್
17. ಭಾರತದ ಸಂವಿಧಾನಕ್ಕೆ ಆಧಾರವಾಗಿ ಪರಿಣಮಿಸಿದ ಶಾಸನ ಯಾವುದು? * 1935 ರ ಭಾರತ ಸರ್ಕಾರದ ಶಾಸನ.
18. ಅಖಿಲ ಭಾರತೀಯ ಸಂಯುಕ್ತ ವ್ಯವಸ್ಥೆಗೆ ಅವಕಾಶ ಮಾಡಿಕೊಟ್ಟ ಶಾಸನ ಯಾವುದು? * 1935 ರ ಭಾರತ ಸರ್ಕಾರದ ಶಾಸನ.
19. ರೆಗ್ಯೂಲೇಟಿಂಗ್ ಶಾಸನ : 1773, ಪಿಟ್ಸ್ ಇಂಡಿಯಾ ಶಾಸನ : _______________ * 1784
20. ಬ್ರಿಟೀಷರ ಯಾವ ನೀತಿ ಇಂಗ್ಲೀಷರಿಗೆ ದೇಶಿಯ ರಾಜರುಗಳನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳಲು ಅವಕಾಶ ಮಾಡಿಕೊಟ್ಟಿತು? * ಸಹಾಯಕ ಸೈನ್ಯ ಪದ್ದತಿ
21. ದ್ವಿ–ಮುಖ ಸರ್ಕಾರ ರದ್ದಾದುದ್ದು ಯಾವ ಶಾಸನದಿಂದ? * 1773 ರ ರೆಗ್ಯೂಲೇಟಿಂಗ್ ಶಾಸನ
22. ಎರಡನೇ ಬಾಜಿರಾಯನು ಸಹಾಯಕ ಸೈನ್ಯಪದ್ದತಿಯನ್ನು ಏಕೆ ಒಪ್ಪಿಕೊಂಡನು?
    - ಮರಾಠ ನಾಯಕರಲ್ಲಿ ಅಧಿಕಾರಕ್ಕಾಗಿ ಪರಸ್ಪರ ಕಚ್ಚಾಟಗಳು ಆರಂಭವಾಗಿದ್ದರಿಂದಾಗಿ , ಇವುಗಳಿಂದ ತಪ್ಪಿಸಿಕೊಂಡು ನೆಮ್ಮಧಿಯಿಂದ ಅಧಿಕಾರ ನಡೆಸುವ ಸಲುವಾಗಿ ಎರಡನೇ ಬಾಜಿರಾಯನು ಸಹಾಯಕ ಸೈನ್ಯಪದ್ಧತಿಯನ್ನು ಸ್ವೀಕರಿಸಿದನು.
23. ದುಲೀಪ್ ಸಿಂಗನಿಗೆ ಸಹಾಯಕ ಸೈನ್ಯಪದ್ದತಿ ಒಪ್ಪಿಕೊಳ್ಳುವುದು ಅನಿವಾರ್ಯವಾಯಿತು ಏಕೆ?
    - ಆಂಗ್ಲೋ –ಸಿಖ್ ಯುದ್ದಗಳಲ್ಲಿ ಸಿಖ್ ಸೈನ್ಯಕ್ಕೆ ಸೋಲು ಉಂಟಾಗಿದ್ದರಿಂದ ದುಲೀಪ್ ಸಿಂಗನಿಗೆ ಅಧಿಕಾರ ಉಳಿಸಿಕೊಳ್ಳುವ ಸಲುವಾಗಿ ಸಹಾಯಕ ಸೈನ್ಯಪದ್ದತಿ ಸ್ವೀಕರಿಸುವುದು ಅನಿವಾರ್ಯವಾಯಿತು.
24. ಬ್ರಿಟೀಷರು ಭಾರತದಲ್ಲಿ ಹೂಡಿದ ಕೈಗಾರಿಕ ಬಂಡವಾಳದ ಪರಿಣಾಮವೇನು?
    - ಬ್ರಿಟೀಷರು ಭಾರತದಲ್ಲಿ ಹೂಡಿದ ಕೈಗಾರಿಕಾ ಬಂಡವಾಳದ ಪರಿಣಾಮದಿಂದಾಗಿ ಭಾರತದ ಗೃಹಕೈಗಾರಿಕೆಗಳು ಅವನತಿ ಹೊಂದಿದವು. ಕುಶಲಕರ್ಮಿಗಳು ನಿರುದ್ಯೋಗಿಗಳಾದರು.
25. ಯೂರೋಪಿನಲ್ಲಿ ಬಂಡವಾಳ ಶಾಹಿತ್ವಕ್ಕೆ ಕಾರಣವಾದ ಅಂಶಗಳಾವುವು?
    - ಯೂರೋಪಿನಲ್ಲಿ ಕೃಷಿ ಮತ್ತು ಕೈಗಾರಿಕೆಗಳಲ್ಲಿ ಹೊಸ ತಂತ್ರಜ್ಞಾನ ಮತ್ತು ಅನ್ವೇಷಣೆಗಳು ಉಂಟಾಗಿ ಬಂಡವಾಳ ಶಾಹಿತ್ವಕ್ಕೆ ಕಾರಣವಾಯಿತು.
26. ಕೇಂದ್ರದಲ್ಲಿ ಎರಡು ಶಾಸನ ಸಭೆಗಳ ರಚನೆಗೆ ಶಿಫಾರಸ್ಸು ಮಾಡಿದ ಶಾಸನ ಯಾವುದು?
    - 1919ರ ಶಾಸನ
27. ಕ್ರಿ.ಶ.1935ರ ಭಾರತ ಸರ್ಕಾರದ ಕಾಯ್ದೆಯು ಒಂದು ಮುಖ್ಯ ದಾಖಲೆಯಾಗಿದೆ ಹೇಗೆ?

SAVI BALAGA MANDYA

- ಕ್ರಿ.ಶ. 1935ರ ಕಾಯ್ದೆಯು ಅಖಿಲ ಭಾರತೀಯ ಸಂಯುಕ್ತ ರಾಜ್ಯಕ್ಕೆ ಅವಕಾಶ ಮಾಡಿಕೊಟ್ಟದ್ದು ಮತ್ತು ಆಡಳಿತದಲ್ಲಿ ಪ್ರಾಂತ್ಯಗಳಿಗೆ ಸ್ವಾಯತ್ತತೆ ನೀಡಿದೆ.

28. 1861ರ ಇಂಡಿಯನ್ ಕೌನ್ಸಿಲ್ ಕಾಯ್ದೆಯು ಭಾರತದ ಸಂವಿಧಾನದ ಬೆಳವಣಿಗೆಯಲ್ಲಿ ಹೇಗೆ ಪ್ರಮುಖವಾಗಿದೆ?

- 1861 ರ ಕಾಯ್ದೆಯು ಕಾರ್ಯಕಾರಿಯ ಸಮಿತಿಯಲ್ಲಿ ಭಾರತೀಯರನ್ನು ನಾಮಕರಣ ಮಾಡಿಕೊಳ್ಳುವ ಅವಕಾಶ ಕಲ್ಪಸಲಾಯಿತು.

**ಅಧ್ಯಾಯ – 5. ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು ( 2 ಅಂಕ)**

**ಒಂದು ಅಂಕದ ಪ್ರಶ್ನೆಗಳು.**

1. "ಭಾರತೀಯನವ್ರೋದಯ ಜನಕ" ಎಂದು ಯಾರನ್ನು ಕರೆಯಲಾಗಿದೆ? * ರಾಜರಾಮ್ ಮೋಹನರಾಯ್.
2. ಸತಿ ಸಹಗಮನ ಪದ್ದತಿ ನಿಷೇಧ ಕಾಯ್ದೆಯನ್ನು ಜಾರಿಗೆ ತಂದವರು ಯಾರು? * ಲಾರ್ಡ್ ವಿಲಿಯಂ ಬೆಂಟಿಂಕ್
3. ವೇದಗಳಿಗೆ ಹಿಂತಿರುಗಿ ಎನ್ನುವ ಘೋಷಣೆ ಮಾಡಿದವರು ಯಾರು? * ದಯಾನಂದ ಸರಸ್ವತಿ.
4. ಭಾರತದಲ್ಲಿ ಥೀಯೋಸಾಫಿಕಲ್ ಸೊಸೈಟಿಯ ಕಾರ್ಯಗಳಿಗೆ ನವ ಚೈತನ್ಯ ನೀಡಿದವರು ಯಾರು? * ಆನಿಬೆಸೆಂಟ್.
5. ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಪ್ರಥಮಬಾರಿಗೆ ಪ್ರೌಢಶಾಲೆಯನ್ನು ತೆರೆದವರು ಯಾರು? * ಎಂ.ಜಿ. ರಾನಡೆ
6. ಡಾ. ಬಿ.ಆರ್. ಅಂಬೇಡ್ಕರ್ ಯಾರ ತತ್ವಗಳಿಂದ ಪ್ರಭಾವಿತರಾದರು? * ಜ್ಯೋತಿ ಬಾಪುಲೆ .
7. ಅಲಿಘರ್ ಚಳುವಳಿಯ ನಾಯಕತ್ವವನ್ನು ವಹಿಸಿದವರು ಯಾರು? * ಸರ್ ಸೈಯ್ಯಾದ್ ಅಹಮದ್ ಖಾನ್.
8. ಕ್ರಿ.ಶ. 1893 ರಲ್ಲಿ ಚಿಕಾಗೋ ವಿಶ್ವ ಧರ್ಮ ಸಮ್ಮೇಳನದಲ್ಲಿ ಭಾಗವಹಿಸಿದ್ದ ಭಾರತೀಯ ಯಾರು? * ಸ್ವಾಮಿ ವಿವೇಕಾನಂದ.
9. ಥಿಯಾಸಾಫಿಕಲ್ ಸೊಸೈಟಿಯ ಮೂಲ ಸ್ಥಾಪಕ ಯಾರು? * ಮ್ಯಾಡಂ ಬ್ಲಾವಟಿಸ್ಕಿ ಮತ್ತು ಕರ್ನಲ್ ಹೆಚ್.ಎಸ್. ಆಲ್ಕಾಟ್
10. ಪ್ರಾರ್ಥನಾ ಸಮಾಜವು ಶಿಕ್ಷಣ ಕ್ಷೇತ್ರದ ಪ್ರಗತಿಗೆ ಸ್ಥಾಪಿಸಿದ ಸಂಸ್ಥೆ ಯಾವುದು? * ಡೆಕ್ಕನ್ ಶಿಕ್ಷಣ ಸಂಸ್ಥೆ
11. ಆಂಗ್ಲೋ– ಒರಿಯೆಂಟಲ್ ಕಾಲೇಜನ್ನು ಸ್ಥಾಪಿಸಿದವರು ಯಾರು? * ಸರ್. ಸೈಯಾದ್ ಅಹಮದ್ ಖಾನ್.
12. ಸ್ವಾತಂತ್ರ್ಯ ಪ್ರತಿಯೊಬ್ಬ ಮನುಷ್ಯನ ಪ್ರಥಮ ಅವಶ್ಯಕತೆ ಎಂದು ಪ್ರತಿಪಾದಿಸಿದವರು ಯಾರು? * ಜ್ಯೋತಿ ಬಾಪುಲೆ.
13. ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಪ್ರತಿಪಾದಿಸಿದ ಮೊದಲ ಸಮಾಜ ಸುಧಾರಕ ಯಾರು? * ಜ್ಯೋತಿ ಬಾಪುಲೆ.
14. ಸತಿಪದ್ದತಿ ನಿಷೇಧಿಸಲು ಹೋರಾಡಿದ ಮೊದಲ ಸಮಾಜ ಸುಧಾರಕ ಯಾರು? * ರಾಜಾರಾಮ್ ಮೋಹನ ರಾಯ್.
15. ಆನಿಬೆಸೆಂಟರು ಹೋಂರೂಲ್ ಚಳುವಳಿಯನ್ನು ಸ್ಥಾಪಿಸಿದ ವರ್ಷ ಯಾವುದು? * 1916
16. 'ಜಾತಿಯು ಯೋಗ್ಯತೆಯಿಂದಹೊರತುಹುಟ್ಟಿನಿಂದಲ್ಲ' ಎಂದುಪ್ರತಿಪಾಧಿಸಿದಸಮಾಜ ಸುಧಾರಕ ಯಾರು? * ದಯಾನಂದ ಸರಸ್ವತಿ
17. ಭಾರತದ ಇತಿಹಾಸದಲ್ಲಿ 19ನೇ ಶತಮಾನವನ್ನು ಏನೆಂದು ಕರೆಯಲಾಗಿದೆ? * ನವ್ರೋದಯ ಕಾಲ
18. ಶುದ್ಧಿ ಚಳುವಳಿಯು ಯಾವ ಸಮಾಜದ ಪ್ರಮುಖ ಚಟುವಟಿಕೆಯಾಗಿದೆ? * ಆರ್ಯ ಸಮಾಜ.

**ಎರಡು ಅಂಕದ ಪ್ರಶ್ನೆಗಳು.**

1. ರಾಜರಾಮ ಮೋಹನರಾಯರನ್ನು 'ಭಾರತೀಯನವ್ರೋದಯದ ಜನಕ' ಎಂದು ಕರೆಯಲು ಕಾರಣಗಳೇನು?
    - ಭಾರತೀಯ ಸಾಮಾಜಿಕ ಕ್ಷೇತ್ರದ ಬೆಳವಣಿಗೆಗೆ ದಿಟ್ಟ ನಾಯಕತ್ವವನ್ನು ವಹಿಸಿ ಅದಕ್ಕೆ ಚಾಲಕತ್ವ ಕೊಟ್ಟವರಲ್ಲಿ ರಾಜರಾಮ್ ಮೋಹನರಾಯರು ಮೊದಲಿಗರು. ಆದ್ದರಿಂದ ಇವರನ್ನು 'ಭಾರತೀಯನವ್ರೋದಯದ ಜನಕ' ಎಂದುಕರೆಯಲಾಗಿದೆ.
2. ದಯಾನಂದ ಸರಸ್ವತಿಯವರು 'ವೇದಗಳಿಗೆಹಿಂತಿರುಗಿ' ಎಂದು ಕರೆನೀಡಲು ಕಾರಣವೇನು?
    - ಎಲ್ಲಾ ವೇದಗಳು ಸತ್ಯವನ್ನು ಹೊಂದಿವೆ. ಅವು ಸರ್ವಜ್ಞಾನದ ಮೂಲಗಳಾಗಿವೆ ಎಂಬುದು ಅವರ ನಂಬಿಕೆಯಾಗಿತ್ತು. ಆದ್ದರಿಂದ ದಯಾನಂದ ಸರಸ್ವತಿಯವರು 'ವೇದಗಳಿಗೆಹಿಂತಿರುಗಿ' ಎಂದು ಕರೆನೀಡಿದರು.
3. 1893ರ ವಿಶ್ವ ಧರ್ಮ ಸಮ್ಮೇಳನದಲ್ಲಿ ವಿವೇಕಾನಂದರು ಜಗತ್ತಿಗೆ ನೀಡಿದ ಸಂದೇಶವೇನು?
    - ಸರ್ವ ಧರ್ಮ ಸಹಿಷ್ಣುತೆ
    - ಸಕಲ ಧರ್ಮಗಳು ಸತ್ಯ. ಎಂಬುದನ್ನು ಪ್ರತಿಪಾದಿಸಿದರು.
4. ಥೀಯೋಸಾಫಿಕಲ್ ಸೊಸೈಟಿಯ ಸ್ಥಾಪನೆಯ ಮುಖ್ಯ ಉದ್ದೇಶವೇನು?
    - ಯಾವುದೇ ಬೇಧ–ಭಾವ ವಿಲ್ಲದೆ ವಿಶ್ವಭ್ರಾತುತ್ವದ ನಿರ್ಮಾಣ,
    - ವೈಚಾರಿಕತೆಯ ತುಲನಾತ್ಮಕ ಅಧ್ಯಯನ
    - ಪ್ರಕೃತಿ ನಿಯಮ ಹಾಗೂ ಮಾನವನ ಸುಪ್ತ ಶಕ್ತಿಗಳನ್ನು ಪತ್ತೆ ಹಚ್ಚುವುದು.

SAVI BALAGA MANDYA

5. ಭಾರತೀಯ ಇತಿಹಾಸದಲ್ಲಿ 19ನೇಯ ಶತಮಾನವನ್ನು ಭಾರತೀಯ ನವೋದಯ ಕಾಲವೆಂದು ಕರೆಯಲಾಗಿದೆ ಏಕೆ?

- ಈ ಕಾಲಾವಧಿಯಲ್ಲಿ ಪಾಶ್ಚಿಮಾತ್ಯ ನಾಗರೀಕತೆಯ ಸಂಪರ್ಕವು ಭಾರತೀಯರಿಗೆ ದೊರೆಯಿತು.
- ಈ ಅವಕಾಶದಿಂದ ಇಂಗ್ಲೀಷ್ ವಿದ್ಯಾಭ್ಯಾಸದ ಸೌಲಭ್ಯ ದೊರೆಯಿತು.
- ಭಾರತೀಯರಲ್ಲಿ ವೈಚಾರಿಕತೆಯ ಮನೋಭಾವ ಬೆಳೆಯಿತು.
- ಇದು ಮೂಢನಂಬಿಕೆಗಳನ್ನು ಪ್ರಶ್ನಿಸುವಂತೆ ಮಾಡಿತು.
- ಭಾರತೀಯರಲ್ಲಿ ಪ್ರಜಾಪ್ರಭುತ್ವ , ಸ್ವಾತಂತ್ರ್ಯ, ಸಮಾನತೆ ರಾಷ್ಟ್ರೀಯತೆಯಂತಹ ವಿಚಾರಗಳನ್ನು ಪಾಶ್ಚತ್ಯ ಪರಿಕಲ್ಪನೆಗಳು ಪರಿಚಯಿಸಿದವು.

6. ಬ್ರಹ್ಮ ಸಮಾಜದ ಬೋಧನೆಗಳಾವುವು?

- ಹಿಂದೂ ಧರ್ಮದಲ್ಲಿದ್ದ ಆಚಾರ ವಿಚಾರಗಳ ಸುಧಾರಣೆಗಳಿಗಾಗಿ ಪ್ರಯತ್ನ.
- ವಿಗ್ರಹಾರಾದನೆ ಮತ್ತು ಬಹುದೇವತಾ ಆರಾಧನೆಗೆ ವಿರೋದ.
- ಏಕ ದೇವತಾ ಆರಾಧನೆಗೆ ಪ್ರೋತ್ಸಾಹ.
- ಯಜ್ಞಯಾಗಾದಿಗಳ ಖಂಡನೆ, ಪುರೋಹಿತ ಶಾಹಿತ್ವಕ್ಕೆ ವಿರೋಧ.
- ಸತಿ ಪದ್ದತಿ ಮತ್ತು ಬಾಲ್ಯವಿವಾಹ ಪದ್ದತಿ ವಿರುದ್ಧ ಹೋರಾಟ.
- ವಿದವೆಯರ ಪುನರ್ ವಿವಾಹ ಮತ್ತು ಸ್ತ್ರೀಯರ ವಿದ್ಯಾಬ್ಯಾಸ ಕ್ಕೆ ಪ್ರೋತ್ಸಾಹ.

7. ದಯಾನಂದ ಸರಸ್ವತಿ ರವರ ಬೋಧನೆಗಳನ್ನು ತಿಳಿಸಿ.

- ವೇದಗಳು ಸತ್ಯ ಮತ್ತು ಜ್ಞಾನದ ಮೂಲಾಧಾರಗಳಾದರಿಂದ ಜನತೆಗೆ ವೇದಗಳಿಗೆ ಹಿಂದಿರುಗಿ ಎಂದು ಕರೆನೀಡಿದರು.
- ವಿಗ್ರಹ ಆರಾಧನೆ ಮತ್ತು ಜಾತಿ ಪದ್ದತಿಯನ್ನು ಖಂಡಿಸಿದರು.
- ಜಾತಿಯು ಯೋಗ್ಯತೆಯಿಂದ ಹೊರತು ಹುಟ್ಟಿನಿಂದಲ್ಲ ಎಂದು ಪ್ರತಿಪಾದಿಸಿದರು.
- ಅನೇಕ ಅರ್ಥಹೀನ ಪದ್ಧತಿಗಳನ್ನು ಹಾಗೂ ಪುರೋಹಿತ ಶಾಹಿಯ ಅಧಿಕಾರವನ್ನು ತಿರಸ್ಕರಿಸಿದರು.
- ವಿಧವಾ ವಿವಾಹವನ್ನು ಪ್ರೋತ್ಸಾಹಿಸಿದರು
- ಸ್ವದೇಶಿ ವಸ್ತುಗಳ ಬಳಕೆಗೆ ಕರೆನೀಡಿದರು.

8. ಪ್ರಾರ್ಥನಾ ಸಮಾಜದ ಸುಧಾರಣೆಗಳನ್ನು ತಿಳಿಸಿ.

- ಆತ್ಮಾರಾಂ ಪಾಂಡುರಂಗರವರು ಪ್ರಾರ್ಥನಾ ಸಮಾಜದ ಸ್ಥಾಪಕರು.
- ಮಾನವನ ಸೇವೆಯೇ ಪರಮಾತ್ಮನ ಸೇವೆ ಎಂಬುದು ಇದರ ನೆಲೆಗಟ್ಟಾಗಿತ್ತು.
- ಈ ಸಮಾಜವು ಡೆಕ್ಕನ್ ಶಿಕ್ಷಣ ಸಂಸ್ಥೆಯ ಮೂಲಕ ಶಿಕ್ಷಣ ಕ್ಷೇತ್ರದ ಪ್ರಗತಿಗೆ ಶ್ರಮಿಸಿದರು.
- ವಿಧವಾ ವಿವಾಹ, ಸ್ತ್ರೀ ಶಿಕ್ಷಣ, ಜಾತಿ ಪದ್ದತಿ, ವಿಗ್ರಹಾರಾಧನೆ , ಪರದಾ ಪದ್ದತಿಯನ್ನು ವಿರೋದಿಸಿತು.
- ಸರ್ವ ಧರ್ಮ ಸಮನ್ವಯ ಸಾರಿದ ಈ ಸಮಾಜವು ಪುನರುಜ್ಜೀವನ ಚಳುವಳಿಯ ಕಾಲದಲ್ಲಿ ಅನೇಕ ಅನಾಥಾಲಯಗಳು, ರಾಷ್ಟ್ರೀಯ ಶಾಲೆಗಳು ಮತ್ತು ವಿಧವಾಶ್ರಮಗಳನ್ನು ಸ್ಥಾಪಿಸಿತು.

**9.** ಸತ್ಯ ಶೋಧಕ ಸಮಾಜವು ಪ್ರತಿಪಾದಿಸಿದ ಸುಧಾರಣೆಗಳನ್ನು ವಿವರಿಸಿ. **ಅಥವಾ**
ಜೋತಿಭಾಪುಲೆ ರವರ ಸಾಮಾಜಿಕ ಸುಧಾರಣೆಗಳು ಜನಪ್ರಿಯವಾಗಿದ್ದವು ಹೇಗೆ?

- ಸತ್ಯಶೋಧಕ ಸಮಾಜವು ಪಾನ ನಿಷೇಧವನ್ನು ಪ್ರತಿಪಾದಿಸಿತು.
- ಮಾನವನ ಹಕ್ಕುಗಳು ಮತ್ತು ಶೋಷಣೆಗೆ ಒಳಗಾದ ಜನರಿಗೆ ಸಾಮಾಜಿಕ ನ್ಯಾಯ ದೊರಕಿಸುವುದು.
- ಜಾತೀಯತೆ , ಅಸ್ಪೃಶ್ಯತೆ ಮತ್ತು ಸ್ತ್ರೀ ಶೋಷಣೆಗೆ ವಿರೋಧ.
- ಅಂತರ್ ಜಾತಿಯ ವಿವಾಹ ಮತ್ತು ಎಲ್ಲಾ ಜಾತಿಯ ಜನರೊಂದಿಗೆ ಸಹ ಬೋಜನಕ್ಕೆ ಕರೆನೀಡಿತು.
- ಶೂದ್ರರು ಮತ್ತು ಅತಿಶೂದ್ರರು ಅನುಭವಿಸುತ್ತಿದ ಗುಲಾಮಗಿರಿಯನ್ನು ಉಗ್ರವಾಗಿ ಖಂಡಿಸಿತು.

SAVI BALAGA MANDYA

10. ರಾಮಕೃಷ್ಣ ಮಿಷನ್ ದೃಷ್ಠಿಕೊನವನ್ನು ವಿವರಿಸಿ.

- ಪ್ರಾರ್ಥನೆ , ಯೋಗ ಸಾಧನೆಯ ಜೊತೆಗೆ ಸಮಾಜ ಸೇವೆಗೂ ಒತ್ತು ಕೊಡಲಾಯಿತು.
- ಜನಸೇವೆಗಾಗಿ ಅನೇಕ ಶಾಲಾಕಾಲೇಜು ಅನಾಥಾಲಯಗಳನ್ನು ಹಾಗೂ ಆಸ್ಪತ್ರೆಗಳನ್ನು ಸ್ಥಾಪಿಸಲಾಗಿದೆ.
- ಪ್ರವಾಹ, ಬರಗಾಲ, ಕ್ಷಾಮ ಮತ್ತು ರೋಗ ಪರಿಹಾರ ಕಾರ್ಯಗಳಲ್ಲಿ ಜನತೆಗೆ ಸೇವೆ ಮತ್ತು ಸಾಂತ್ವಾನಗಳನ್ನು ನೀಡಲಾಗಿದೆ.
- ಸರ್ವಧರ್ಮ ಸಮಾನತೆಯನ್ನು ಎತ್ತಿ ಹಿಡಿಯಲಾಗಿದೆ.

11. ಸ್ವಾಮಿ ವಿವೇಕಾನಂದರು ಯುವಶಕ್ತಿಯ ಪ್ರೇರಕರಾಗಿದ್ದರು ಹೇಗೆ?

- ಸ್ವಾಮಿ ವಿವೇಕಾನಂದರು ಜೀವನ ಪ್ರೀತಿಯಲ್ಲಿರುವ ಮಹತ್ವವನ್ನು ತೆರೆದಿಟ್ಟು ಭಾರತಿಯರನ್ನು ಎಚ್ಚರಗೊಳಿಸಿದ ಕ್ರಾಂತಿಕಾರಿ ಸನ್ಯಾಸಿ.
- ವ್ಯಕ್ತಿ ಮತ್ತು ವ್ಯಕ್ತಿಯ ಇರುವಿಕೆಗೆ ಮತ್ತು ಸಾಮರ್ಥಕ್ಕೆ ಮಹತ್ವ ನೀಡಬಯಸಿದರು.
- ಮೋಕ್ಷಕ್ಕಾಗಿ ದುಡಿಯಲು ಪ್ರಾರ್ಥನೆ, ಯೊಗ ಸಾಧನೆಗಳಲ್ಲದೆ ಸಮಾಜ ಸೇವೆಯು ಮುಖ್ಯವೆಂದರು.
- ಭಾರತೀಯ ಸಂಸ್ಕೃತಿಯನ್ನು  ವಿಶ್ವಕ್ಕೆ ಪರಿಚಯಿಸಿದರು.

## ಭಾರತದ ಪ್ರಥಮ ಸಂಗ್ರಾಮ

### ಮೂರು ಅಂಕದ ಪ್ರಶ್ನೆಗಳು

**ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯಿಂದಾದ ಪರಿಣಾಮಗಳಾವವು? ವಿಶ್ಲೇಷಿಸಿ   ಅಥವಾ  1857 ರ ದಂಗೆಗೆ ರಾಜಕೀಯ ಕಾರಣಗಳಾವುವು?**

* ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯಿಂದಾದ ಪರಿಣಾಮಗಳು ಅಥವಾ ರಾಜಕೀಯ ಕಾರಣಗಳು

* ಸ್ವಂತ ಮಕ್ಕಳಿಲ್ಲದ ದೇಶಿಯ ಸಂಸ್ಥಾನಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳಬೇಕಾಯಿತು. ಉದಾ:- ಸತಾರ, ಝಾನ್ಸಿ, ಜೈಪುರ, ಉದಯಪುರ

* ಡಾಲಹೌಸಿಯು ತಂಜಾವೂರು ಮತ್ತು ಕರ್ನಾಟಕ ನವಾಬರಿಗಿದ್ದ ರಾಜಪದವಿಯನ್ನು ರದ್ದುಪಡಿಸಿದನು.

*ಮೊಘಲ್ ಚಕ್ರವರ್ತಿ, ಔದ್‌ನ ನವಾಬ ಮೊದಲಾದ ರಾಜರುಗಳನ್ನು ಅಧಿಕಾರದಿಂದ ಪದಚ್ಯುತಗೊಳಿಸಿದರು.

* ಲಕ್ಷಾಂತರ ಸೈನಿಕರು ನಿರುದ್ಯೋಗಿಗಳಾದರು.

**ಕ್ರಿ.ಶ. 1857 ರ ದಂಗೆಗೆ ಆರ್ಥಿಕ ಬದಲಾವಣೆಗಳು ಸಹ ಕಾರಣ ತಿಳಿಸಿ?**

ಕ್ರಿ.ಶ. 1857 ರ ದಂಗೆಗೆ ಆರ್ಥಿಕ ಕಾರಣಗಳು

*ಇಂಗ್ಲಂಡಿನಲ್ಲಾದ ಕೈಗಾರಿಕಾ ಕ್ರಾಂತಿಯಿಂದಾಗಿ ಭಾರತದ ಗೃಹ ಕೈಗಾರಿಕೆಗಳು  ಅವನತಿ ಹೊಂದಿದವು. ಲಕ್ಷಾಂತರ ನೇಕಾರರು ಹಾಗೂ ನೂಲುವವರು ಉದ್ಯೋಗ ಕಳೆದುಕೊಂಡರು.

* ಭಾರತದ ಬಟ್ಟೆ ಇಂಗ್ಲೆಂಡಿನಲ್ಲಿ ಮಾರಾಟವಾಗುವಂತೆ ಅದರ ಮೇಲೆ ದುಬಾರಿ ಸುಂಕ ಹೇರಿದರು.

*ಜಮಿನ್ದಾರಿ ಪದ್ದತಿ ಜಾರಿಗೆ ತಂದು ರೈತರನ್ನು ಶೋಷಣೆಗೆ ಒಳಪಡಿಸಿದರು.

**1857 ರ ದಂಗೆಯು ಹರಡಿದ ರೀತಿಯನ್ನು ತಿಳಿಸಿ.**

*ಎನ್‌ಫೀಲ್ಡ್ ಬಂದುಕುಗಳನ್ನು ಉಪಯೋಗಿಸಲು ನಿರಾಕರಿಸಿ ಬ್ಯಾರಕಪುರ ಸೈನ್ಯದಲ್ಲಿ ಮೊದಲು ದಂಗೆ ಪ್ರಾರಂಭವಾಯಿತು.

*ಈ ದಂಗೆಯು ಕ್ರಮೇಣವಾಗಿ ಮೀರತ್, ದೆಹಲಿ, ಕಾನ್ಪುರ, & ಝಾನ್ಸಿಗೆ ಹರಡಿತು.

*ಕಾನ್ಪುರದಲ್ಲಿ ನಾನಾಸಾಹೇಬ & ತಾತ್ಯಾಟೋಪಿ, ಝಾನ್ಸಿಯಲ್ಲಿ ರಾಣಿ ಲಕ್ಷ್ಮೀಬಾಯಿ ದಂಗೆಯೆದ್ದರು.

*ಬ್ರಿಟಿಷರು ಬಹುಬೇಗ  ಚಾಣಾಕ್ಷತೆಯಿಂದ ದಂಗೆಯನ್ನು ಹತ್ತಿಕ್ಕಿದರು.

SAVI BALAGA MANDYA

**ಕ್ರಿ.ಶ. 1857 ರ ದಂಗೆಯಲ್ಲಿ  ಸೈನಿಕರ ಧಾರ್ಮಿಕ ಮನೋಭಾವವನ್ನು ಪ್ರಚೋದಿಸಿದ ಅಂಶಗಳಾವವು?**

* ಬ್ರಿಟಿಷರ ಸೈನ್ಯದಲ್ಲಿದ್ದ ಭಾರತೀಯ ಸಿಪಾಯಿಗಳ ಸ್ಥಿತಿಯು ಗಂಭೀರವಾಗಿತ್ತು.

*ಭಾರತೀಯ  ಸೈನಿಕರನ್ನು  ಸಾಗರೋತ್ತರ ಸೇವೆಗೆ ಒತ್ತಾಯಿಸಿದ್ದು ದ, ಾರ್ಮಿಕವಾಗಿ ಸೈನಿಕರನ್ನು ಪ್ರಚೋದಿಸಿತು.

*ರಾಯಲ್ ಎನ್‌ಫೀಲ್ಡ್ ಬಂದುಕುಗಳು  ತುಪಾಕಿಗಳಿಗೆ ಹಂದಿ & ಹಸುವಿನ ಕೊಬ್ಬನ್ನು ಸವರಿದ್ದಾರೆಂಬ ವದಂತಿ ಸೈನಿಕರನ್ನು ಕೆರಳಿಸಿತು.

* ಹಿಂದುಗಳಿಗೆ ಹಸು ಪವಿತ್ರವಾದರೆ, ಮುಸ್ಲಿಮರಿಗೆ ಹಂದಿಯು ನಿಷಿದ್ಧವಾಗಿತ್ತು.

**1857 ರ ದಂಗೆಗೆ ಆಡಳಿತಾತ್ಮಕ ಕಾರಣಗಳಾವವು?**

1857 ರ ದಂಗೆಗೆ ಆಡಳಿತ್ಮಾತಕ ಕಾರಣಗಳು

* ಕಾನೂನಿನ ವಿಚಾರದಲ್ಲಿ ಇಂಗ್ಲೀಷರು & ಭಾರತೀಯರು ಮಧ್ಯೆ ತಾರತಮ್ಯ ಮಾಡಲಾಗುತ್ತಿತ್ತು.

* ಇಂಗ್ಲೀಷ ನ್ಯಾಯಾಧೀಶರು  ಬಹುತೇಕವಾಗಿ ಇಂಗ್ಲೀಷರ ಪರವಾಗಿ ನ್ಯಾಯ ನೀಡುತ್ತಿದ್ದರು.

* ಆಂಗ್ಲ ಭಾಷೆಯು ನ್ಯಾಯಾಲಯದ  ಭಾಷೆಯಾಗಿದ್ದರಿಂದ ಹೊಸ ಕಾನೂನಿನ ಆಶಯಗಳು ಜನರಿಗೆ  ಅರ್ಥವಾಗಲಿಲ್ಲ.

**1857 ರ ದಂಗೆಗೆ ಸೈನಿಕ ಕಾರಣಗಳಾವುವು?**

1857 ರ ದಂಗೆಗೆ ಸೈನಿಕ ಕಾರಣಗಳು

* ಬ್ರಿಟಿಷರ ಸೈನ್ಯದಲ್ಲಿದ್ದ ಭಾರತೀಯ ಸಿಪಾಯಿಗಳ ಗಂಭೀರವಾಗಿತ್ತು.

*ಸೈನ್ಯದ ಉನ್ನತ ಹುದ್ದೆಗಳೆಲ್ಲ ಇಂಗ್ಲೀಷ ಸೈನಿಕರಿಗೆ ಮೀಸಲಾಗಿತ್ತು.

* ಆಂಗ್ಲ ಸೈನಿಕರಿಗಿದ್ದ ಸ್ಥಾನಮಾನ, ವೇತನ, ಬಡ್ತಿ ಅವಕಾಶಗಳು ಭಾರತೀಯ ಸೈನಿಕರಿಗೆ ಇರಲಿಲ್ಲ.

* ಭಾರತೀಯ ಸೈನಿಕರನ್ನು ಸಾಗರೋತ್ತರ ಸೇವೆಗೆ ಒತ್ತಾಯಿಸಿದ್ದು ಧಾರ್ಮಿಕವಾಗಿ ಸೈನಿಕರನ್ನು ಪ್ರಚೋದಿಸಿತು.

**ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ತತ್‌ಕ್ಷಣದ ಕಾರಣಗಳಾವವು**

ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ತತ್‌ಕ್ಷಣದ ಕಾರಣ

*ಸೈನಿಕರಿಗೆ ಹೊಸತರಹದ 'ಎನ್‌ಫೀಲ್ಡ್'ಬಂದೂಕುಗಳನ್ನು ಒದಗಿಸಿ ಇದಕ್ಕೆಹೊಸಮಾದರಿಯ ತೋಟಾಗಳನ್ನು ಒದಗಿಸಿದರು.

*ಈ ತೋಟಾಗಳಿಗೆ ದನದಮತ್ತುಹಂದಿಯ ಕೊಬ್ಬನ್ನುಸವರಿದ್ದರು ಎಂಬವದಂತಿ ಹಬ್ಬಿತ್ತು. ಇವುಗಳನ್ನು ಬಾಯಿಯಿಂದ ಕಚ್ಚಿ ತೆರೆಯಬೇಕಾಗಿತ್ತು.

* ಹಿಂದುಗಳಿಗೆ ಹಸು ಪವಿತ್ರವಾದರೆ, ಮುಸ್ಲಿಮರಿಗೆ ಹಂದಿಯು ನಿಷಿದ್ದವಾಗಿತ್ತು.    4]  ಇದು ಹಿಂದೂ –ಮುಸ್ಲಿಂ ಸೈನಿಕರಿಗೆ ತೀವ್ರ ಕೋಪವನ್ನು ತರಿಸಿತು.

**1858 ರಬ್ರಿಟನ್ ರಾಣಿಯ ಘೋಷಣೆಯಲ್ಲಿದ್ದ ಅಂಶಗಳಾವವು? ಅಥವಾ 1857 ರ ದಂಗೆಯ ಪರಿಣಾಮಗಳಾವವು?**

1]  ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆ ಅಂತ್ಯಗೊಂಡು ಇಂಗ್ಲೀಷ ಸರ್ಕಾರ ನೇರವಾಗಿ ಆಡಳಿತವನ್ನು ತನ್ನ ಕೈಗೆ ತೆಗೆದುಕೊಂಡಿತು.

2]  ಕಂಪನಿಯು ದೇಶಿಯರಾಜರೊಂದಿಗೆ ಮಾಡಿಕೊಂಡಿದ್ದ ಒಪ್ಪಂದವನ್ನು ಅಂಗೀಕರಿಸಲಾಯಿತು.

3]  ಇಂಗ್ಲೀಷ ಸರ್ಕಾರ ದತ್ತು ಪುತ್ರರಿಗೆ ಹಕ್ಕಿಲ್ಲ ಎಂಬ ಕಾನೂನನ್ನು ಹಿಂತೆಗೆದುಕೊಂಡಿತು.

4]  ಕ್ರಿ.ಶ. 1858 ರಲ್ಲಿ ಬ್ರಿಟಿಷ ರಾಣಿ ವಿಕ್ಟೋರಿಯಾ ಒಂದು ಘೋಷಣೆ ಹೊರಡಿಸಿ ಭಾರತೀಯರಿಗೆ  ಸುಭದ್ರ ಸರ್ಕಾರ  ನೀಡುವುದಾಗಿ ಆಶ್ವಾಸನೆ ಇತ್ತಳು.

SAVI BALAGA MANDYA

5] ಭಾರತೀಯರ ಧಾರ್ಮಿಕ ನಂಬಿಕೆಗಳಲ್ಲಿ ಬ್ರಿಟಿಷ ಸರ್ಕಾರ ಹಸ್ತಕ್ಷೇಪ ಮಾಡುವುದಿಲ್ಲವೆಂದು ರಾಣಿ ಭರವಸೆ ಇತ್ತಳು.

6] ಭಾರತೀಯರ ಬೆಂಬಲ ಗಳಿಸಿದರೆ ಮಾತ್ರ ಇಲ್ಲಿ ಶಾಂತಿಯಿಂದ ಆಳಬಹುದೆಂದು ಬ್ರಿಟಿಷರು ಮನಗಂಡರು.

**1857 ರ ದಂಗೆಯ ವಿಫಲತೆಗೆ ಕಾರಣಗಳನ್ನು ಪಟ್ಟಿ ಮಾಡಿ**

* ಸೂಕ್ತ ಸೇನಾ ನಾಯಕತ್ವ ಕೊರತೆ

*ಸಿಪಾಯಿಗಳು ಅನೇಕ ಕಡೆ, ಲೂಟಿ, ದರೋಡೆ, ಮಾಡಿ ಜನಸಾಮಾನ್ಯರ ವಿಶ್ವಾಸ ಕಳೆದುಕೊಂಡರು.

* ಇಂಗ್ಲೀಷರಲ್ಲಿದ್ದ ಸುಧಾರಿತ ಶಸ್ತ್ರಾಸ್ತ್ರಗಳು ಸಂಪರ್ಕ ಸಾಧನಗಳು ಸಿಪಾಯಿಗಳಲ್ಲಿ ಇರಲಿಲ್ಲ.

* ಸಿಖ್ಖರು, ನಿಜಾಮರು, ಗ್ವಾಲಿಯರನ ರಾಜ ಮುಂತಾದ ದೇಶಿಯ ರಾಜರುಗಳು ಬ್ರಿಟಿಷರಿಗೆ ಬೆಂಬಲಿಸಿದರು ಆದರೆ ಸಿಪಾಯಿಗಳಿಗೆ ಬೆಂಬಲ ನೀಡಲಿಲ್ಲ.

* ಸಿಪಾಯಿಗಳಲ್ಲಿ ಸಂಘಟನೆಯ ಕೊರತೆ ಇತ್ತು.

* ಇಂಗ್ಲೀಷರು ತಮ್ಮ ಆಡಳಿತ ಉಳಿಸಿಕೊಳ್ಳುವ ಗುರಿ ಹೊಂದಿದ್ದರು. ಆದರೆ ಸಿಪಾಯಿಗಳಿಗೆ ಎಲ್ಲರಿಗೂ ಒಪ್ಪಿಗೆಯಾಗುವಂತಹ ಗುರಿ ಇರಲಿಲ್ಲ.

**<u>7. ಭಾರತದಲ್ಲಿ ಬ್ರಿಟಿಷ್‌ಆಡಳಿತದ ಪರಿಣಾಮಗಳು</u>**

**ಬ್ರಿಟಿಷ ಏಕರೂಪದ ಆಡಳಿತ ವ್ಯವಸ್ಥೆಯೂ ಭಾರತೀಯರಲ್ಲಿ ಹೇಗೆ ರಾಷ್ಟ್ರೀಯತೆಯನ್ನು ಬೆಳೆಸಿತು?**

ದೇಶದಲ್ಲಿ ಹಲವಾರು ಸಂಸ್ಥಾನಗಳು ಅಸ್ತಿತ್ವದಲ್ಲಿದ್ದರೂ ಅವುಗಳ ಮೇಲೆ ಬ್ರಿಟಿಷರು ನಿಯಂತ್ರಣ ಹೊಂದಿದ್ದರು. ಇದರಿಂದ ಆಡಳಿತ ವ್ಯವಸ್ಥೆಯನ್ನು ಏಕರೂಪತೆಯನ್ನು, ಕಾನೂನು ಸುವ್ಯವಸ್ಥೆಯನ್ನು ಸಂರಕ್ಷಿಸುವಲ್ಲಿ ಬ್ರಿಟಿಷರು ಸಫಲರಾಗಿದ್ದರು. ಇದರಿಂದ ದೇಶದಲ್ಲಿ ಸಮಾನತೆ ಏಕರೂಪದ ಅಧಿಕಾರಶಾಹಿತ್ವ ಅಸ್ತಿತ್ವಕ್ಕೆ ಬಂದಿತು.

**ಕೈಗಾರಿಕ ಕ್ರಾಂತಿಯಿಂದ ಭ ಾರತದಲ್ಲಾದ ಬದಲಾವಣೆಗಳೇನು?**

* ಕೈಗಾರಿಕ ಕ್ರಾಮತಿಯಿಂದಾಗಿ ಉತ್ಪಾದನಾ ಕೇಂದ್ರವಾಗಿದ್ದ ಭಾರತ ಕೇವಲ ಕಚ್ಚಾ ವಸ್ತುಗಳನ್ನು ರಫ್ತು ಮಾಡುವ ಸ್ಥಿತಿ ತಲುಪಿತು.

* ಬ್ರಿಟಿಷರು ಸಿದ್ದ ವಸ್ತುಗಳನ್ನು ಭಾರತಕ್ಕೆ ತಂದು ಕಡಿಮೆ ಬೆಲೆಗೆ ಮಾರಲು ಪ್ರಾರಂಭಿಸಿದರು. *ಭಾರತದ ಸರಕುಗಳು ಸ್ಪರ್ಧಿಸಲಾಗಿದೆ ಸೋತವು.

* ಭಾರತದಲ್ಲಿ ಹತ್ತಿಬಟ್ಟೆ, ಸೋಬು ಕಾಗದ ತಯಾರಿಕೆ, ಕಾಫಿ ತೋಟಗಳು, ಉದ್ಯಮಗಳು ನಿಧಾನವಾಗಿ ಬೆಳೆದವು

* ದೇಶದ ಪ್ರಮುಖ ಪಟ್ಟಣಗಳಲ್ಲಿ ನವೀಕೃತ , ಯಾಂತ್ರಿಕತೆಯಿಂದ ಕೂಡಿರುವ ಕೈಗಾರಿಕೆಗಳು ಅಸ್ಥಿತ್ವಕ್ಕೆ ಬಂದವು

**ಬ್ರಿಟಿಷರು ಶಿಕ್ಷಣ ಕ್ಷೇತ್ರದಲ್ಲಿ ಕೈಗೊಂಡ ಸುದ, ಾರಣೆಗಳಾವವು ?**

ವಿಲಿಯಂ ಬೆಂಟಿಂಕನು ಮೇಕಾಲಿ ವರದಿಯಂತೆ ಇಂಗ್ಲೀಷ ಶಿಕ್ಷಣಕ್ಕೆ ಬುನಾದಿ ಹಾಕಿದನು. ಇದು ಆಂಗ್ಲ ಶಿಕ್ಷಣವನ್ನು ಬಲಪಡಿಸಿ ಪಾಶ್ಚಿಮಾತ್ಯ ಸಾಹಿತ್ಯ ಮತ್ತು ವಿಚಾರಗಳ ಅಧ್ಯಯನವನ್ನು ಬೆಂಬಲಿಸಿತು.

ಬಂಗಾಳದ ಹಿಂದೂ ಕಾಲೇಜಿನಲ್ಲಿ ಪಾಶ್ಚಿಮಾತ್ಯ ಸಾಹಿತ್ಯ ಮಾನವಶಾಸ್ತ್ರ ಮತ್ತು ವಿಜ್ಞಾನವನ್ನು ಬೋಧಿಸಲು ಪ್ರಾರಂಭಿಸಿತು.

ಕಲ್ಕತ್ತಾ, ಮದ್ರಾಸ್, ಮುಂಬೈ ವಿಶ್ವವಿದ್ಯಾನಿಲಯಗಳು ಅಸ್ತಿತ್ವಕ್ಕೆ ಬಂದವು.

ರೂರ್ಕಿಯಲ್ಲಿ ಇಂಜಿನಿಯಂರಿಂಗ್ ಕಾಳೇಜನ್ನಿ ಸ್ಥಾಪಿಸಲಾಯಿತು.

ಸಾರ್ವಜನಿಕ ಶಿಕ್ಷಣ ಇಲಾಖೆಯನ್ನು ರಚಿಸಿ ಪ್ರಾಥಮಿಕ ಶಿಕ್ಷಣಕ್ಕೆ ಒತ್ತು ನೀಡಲು ಚಾತ್ಸವುಡ್ ಆಯೋಗವು ಸಲಹೆ ನೀಡಿತು. ಶಿಕ್ಷಣ ಕ್ಷೇತ್ರದಲ್ಲಿನ ಪಾಶ್ಚಿ ತ್ಯ ಬೆಳವಣಿಗೆಯು ಸ್ವಾತಂತ್ರ್ಯ ಚಳುವಳಿಗೆ ಪ್ರೇರಣೆಯಾಯಿತು. ಪಾಶ್ಚಿತ್ಯ ವಿಚಾರ ರೆಗಳು ರಾಷ್ಟ್ರೀಯ ಜಾಗ್ರತಿಗೆ ಸಹಕಾರಿಯಾದವು.

**ಸ್ವಾತಂತ್ರ್ಯ ಚಳುವಳಿಯಲ್ಲಿಸಾರಿಗೆ–ಸಂಪರ್ಕದ ಪಾತ್ರವನ್ನು ವಿವರಿಸಿ.?**



SAVI BALAGA MANDYA

*ಭಾರತದಮೂಲೆ–ಮೂಲೆಗಳನ್ನುಶೀಘ್ರವಾಗಿ ತಲುಪಲು ರಸ್ತೆಮತ್ತು ಕೈಲಿನವ್ಯವಸ್ಥೆಯನ್ನು ಕಲ್ಪಿಸಲಾಯಿತು.  ಮೂಲದಲ್ಲಿ ಈ ವ್ಯವಸ್ಥೆಗಳನ್ನು ಕಚ್ಚಾವಸ್ತು ಹಾಗೂ ಸಿದ್ಧ ವಸ್ತುಗಳ ಸಾಗಾಣಿಕೆ ಮತ್ತು ಸೇನೆಯು ಸಂಚರಿಸಲು ನಿರ್ಮಿಸಲಾಯಿತು.

ಪರೋಕ್ಷವಾಗಿ ಇವು ದೇಶಿಯರನ್ನು ಸಂಘಟಿಸಲು, ಸಂಚರಿಸಲು, ಸಹಾಯವಾಗಿ  ಪರಸ್ಪರ ತಮ್ಮ ಸಮಸ್ಯೆಗಳನ್ನು ಹಂಚಿಕೊಳ್ಳಲು, ಪ್ರಚಾರ ಮಾಡಲು ಸಾಧ್ಯವಾಯಿತು.

ಇದು ದೇಶಿಯರನ್ನು ಒಂದುಗೂಡಿಸಿ ರಾಷ್ಟ್ರೀಯತೆಗೆ ಕಾರಣವಾಯಿತು.

**ಭಾರತದಲ್ಲಿ ಬ್ರಿಟೀಷರು ಜಾರಿಗೆತಂದ ಕಂದಾಯ ಪದ್ದತಿಗಳ ನಡುವಿನ ವ್ಯತ್ಯಾಸಗಳೇನು?**

| ಜಮೀನ್ದಾರಿ ಪದ್ದತಿ | ರೈತವಾರಿ ಪದ್ದತಿ | 3] ಮಹಲ್ವಾರಿ  ಪದ್ಧತಿ |
|---|---|---|
| *ಕಾರನ್ವಾಲೀಸನು ಜಾರಿಗೆ ತಂದನು<br>* ಬಂಗಾಳ ಬಿಹಾರ ಓರಿಸ್ಸಾ ಗಳಲ್ಲಿ ಜಾರಿಗೆ ಬಂದಿತು<br>*ಜಮೀನ್ದಾರರು ರೈತರಿಂದ ಕಂದಾಯ ವಸೂಲು ಮಾಡಿ ಸರ್ಕಾರಕ್ಕೆ ಸಲ್ಲಿಸುತ್ತಿದ್ದರ<br>*ರೈತರು ಜಮೀನ್ಧಾರರಿಂದ ಶೋಷಣೆಗೆ ಒಳಗಾಗಿದ್ದರು | *ಥಾಮಸ್ ಮನ್ರೋ ಜಾರಿಗೆ ತಂದನು<br>*ಮದ್ರಾಸ್ ಮುಂಬೈ ಸಿಂದ ಬಿರಾರ್ ಅಸ್ಸಾಂಗಳಲ್ಲಿ ಜಾರಿಗೆ ಬಂದಿತು<br>*ರೈತರು ಭೂಮಿಯ ಒಡೆತನದ ಹಕ್ಕನ್ನು ಹೊಂದಿದ್ದರು<br>*ಭೂ ಪ್ರಮಾಣದ ಆಧಾರದ ಮೇಲೆ ಕಂದಾಯವನ್ನು ನಿಗಧಿ ಪಡಿಸಲಾಗಿತ್ತು<br>*ಕಂದಾಯ ಕಟ್ಟಲು ವಿಫಲನಾದರೆ ಭೂಮಿಯನ್ನು ವಶಪಡಿಸಿ ಕೊಳ್ಳಲಾಗುತಿತ್ತು | * ಈ ಪದ್ದತಿಯನ್ನು ಅರ್  ಎಂ ಬರ್ಡ ಮತ್ತು ಜೇಮ್ಸ ಥಾಮ್ಸನ್ ಜಾರಿಗೆ ತಂದರು<br>*ಗಂಗ ಕಣಿವೆ, ವಯುವ್ಯ ಪ್ರಾಂತ್ಯ, ಕೇಂದ್ರ ಪ್ರಾಂತ್ಯ, ,ಮತ್ತು ಪಂಜಾಬ್‌ಗಳಲ್ಲಿ ಜಾರಿಗೆ ತರಲಾಯಿತು<br>''ಮಹತ್'' ಎಂದರೆ ತಾಲೂಕು  ಎಂದರೆ ಇಲ್ಲಿ ಕಂದಾಯವಸೂಲಿಗಾಗಿ ಜಮೀನ್ದಾರರಬದಲುಮಹಲ್ದಾರರನ್ನುನೇಮಿಸಲಾಯಿತು. ಮಹಲ್ದಾರರುನಿಗಧಿತ  ಕಂದಾಯವನ್ನುಭೂ ಅಳತೆಯ ಆಧಾರದ  ಮೇಲೆ ರೈತರಿಂದ  ವಸೂಲಿ ಮಾಡಿ ಸರ್ಕಾರಕ್ಕೆ   ನೀಡಬೇಕಾಗಿತ್ತು. |

# ಭಾರತದ ಸ್ವಾತಂತ್ರ್ಯ ಹೋರಾಟ

**ಮಂದಗಾಮಿಗಳು ಯಾರು? ಸ್ವಾತಂತ್ರ ಹೋರಾಟದಲ್ಲಿ  ಅವರ ಪಾತ್ರವನ್ನು ವಿವರಿಸಿ**

* ಭಾರತದ ರಾಜಕೀಯದಲ್ಲಿ ಸಂವಿಧಾನಾತ್ಮಕವಾಗಿ ಬದಲಾವಣೆ ತರಬೇಕೆಂದು ಪ್ರತಿಪಾದಿಸುತ್ತಿದ್ದ ಕಾಂಗ್ರೆಸ್ ನಾಯಕರನ್ನು ಮಂದಗಾಮಿಗಳು ಎಂದು ಕರೆಯುತ್ತಾರೆ. .*ಮಂದಗಾಮಿಗಳಲ್ಲಿ ಎಂ.ಜಿ. ರಾನಡೆ, ಸುರೇಂದ್ರನಾಥ್‌ಬ್ಯಾನರ್ಜಿ, ದಾದಾಬಾಯಿನವರೋಜಿ, ಗೋಪಾಲ ಕೃಷ್ಣ ಗೋಖಲಮತ್ತುಬದರುದ್ದೀನ್‌ತ್ಯಾಬ್ಜಿಪ್ರಮುಖವಾದವರು*ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಪ್ರಾರಂಭದ ಇಪ್ಪತ್ತು ವರ್ಶಗಳನ್ನು 'ಮಂದಗಾಮಿ ಯುಗ' ಎನ್ನುಮಂದಗಾಮಿಗಳ ಪ್ರಮುಖ ಬೇಡಿಕೆಗಳೆಂದರೆ

*ದೇಶದ ಉನ್ನತ ಹುದ್ದೆಗಳಲ್ಲಿ ಭಾರತೀಯರಿಗೆ ಪ್ರಾತಿನಿಧ್ಯ ದೊರಕಿಸಿಕೊಡುವುದು.

*ಭಾರತ ಮತ್ತು ಇಂಗ್ಲೆಂಡ್ ದೇಶಗಳಲ್ಲಿ ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ಏಕಕಾಲದಲ್ಲಿನಡೆಸುವುದು.

* ಶಾಸನಸಭೆಯನ್ನು ವಿಸರ್ತ್ತಿ ಸುವುದು ಮತ್ತು ಶಾಸನಸಭೆಗೆ ಸದಸ್ಯರನ್ನು ಚುನಾವಣೆಯಿಂದ ಆರಿಸುವುದು.

* ವಿದೇಶಿ ವಸ್ತುಗಳ ಮೇಲೆ ಆಮದು ತೆರಿಗೆಯನ್ನು ಹಾಕಿ ಭಾರತೀಯ ಕೃಷಿ ಮತ್ತು ಕೈಗಾರಿಕೆಗಳನ್ನು ಬಲಪಡಿಸುವುದು.

* ದಾದಾಬಾಯಿ ನವರೂಜಿಯವರು ಸಫತ್ತಿನ ಪ್ರವಾಹ ಸಿದ್ದಾಂತವನ್ನು ಪ್ರತಿಪಾದಿಸಿಭಾರತದ ಸಂಪತ್ತು ಹೇಗೆ ಇಂಗ್ಲೇಂಡಿಗೆಹರಿದು ಹೋಗುತ್ತದೆ ಎಂಬುದನ್ನು ತೋರಿಸಿದರು

SAVI BALAGA MANDYA

**. ಸ್ವಾತಂತ್ರ್ಯ ಹೋರಾಟದಲ್ಲಿ ತೀವ್ರಗಾಮಿಗಳ ಪಾತ್ರವನ್ನು ವಿವರಿಸಿ.**

* ಬಾಲಗಂಗಾಧರ ತಿಲಕ್,ಬಿಪಿನ್ ಚಂದ್ರಪಾಲ್,ಲಾಲಾ ಲಜಪತ್ರಾಯ್,ಅರಬಿಂದ್ ಘೋಷ್ ಇರರು ತೀವ್ರಗಾಮಿಗಳ ನಾಯಕರು

* ಸ್ವಾತಂತ್ರ್ಯ ಹೋರಾಟದಲ್ಲಿ ತಿಲಕರು ಪಾತ್ರ ಅತ್ಯಂತ ಮಹತ್ವದ್ದಾಗಿದೆ.

* ತೀವ್ರಗಾಮಿಗಳಲ್ಲಿ ಬಾಲ ಗಂಗಾಧರ ತಿಲಕರು ಅತ್ಯಂತ ಪ್ರಮುಖರು.

* ಇವರು ಸ್ವರಾಜ್ಯವುನನ್ನ ಜನ್ಮಸಿದ್ಧಹಕ್ಕು; ಅದನ್ನುಪಡೆದೇ ತೀರುವೆ' ಎಂದು ಘೋಷಿಸುವುದರಮೂಲಕಸ್ವರಾಜ್ಯದ ಕಲ್ಪನೆಯನ್ನು ಜನರಲ್ಲಿ ಮೂಡಿಸಿದರು.

* ತಿಲಕರು ಸ್ವಾತಂತ್ರ್ಯ ಹೋರಾಟಕ್ಕೆ ಜನಸಾಮಾನ್ಯರನ್ನು ಸಂಘಟಿಸುವ ಪ್ರಯತ್ನ ಮಾಡಿದರು.

* ಈ ಹಿನ್ನೆಲೆಯಲ್ಲಿ ತಿಲಕರು ಗಣೇಶ ಉತ್ಸವ ಮತ್ತು ಶಿವಾಜಿ ಉತ್ಸವಗಳ ಮೂಲಕ ಜನರನ್ನು ರಾಷ್ಟ್ರೀಯತೆಗೆ ಪ್ರಚೋದಿಸಿದರು.

* ತಿ-ಕರುಮರಾಠ ಭಾಷೆಯಲ್ಲ 'ಕೇಸರಿ'ಮತ್ತು ಇಂಗ್ಲಿಷ್ಭಾಷೆಯಲ್ಲ'ಮರಾಠ'ಪತ್ರಿಕೆಗಸನ್ನುಬ್ರಿಟಿಶರವಿರುದ್ಧದಹೋರಾಟಕ್ಕೆಬಳಸಿಕೊಂಡರು.

* ಈ ಪತ್ರಿಕೆಗಳಮೂಲಕ ಜನಸಾಮಾನ್ಯರನ್ನು ರಾಷ್ಟ್ರೀಯಹೋರಾಟಕ್ಕೆಪ್ರೇರೇಪಿಸಿದರು.

* ಇವರ ಕ್ರಾಂತಿಕಾರಿ ಬರವಣಿಗೆಗಳು ಜನರ ಉದ್ರೇಕಕ್ಕೆ ಕಾರಣವಾಯಿತು ಎಂಬ ಹಿನ್ನೆಲೆಯಲ್ಲಿ ಬ್ರಿಟಿಷ್ ಸರ್ಕಾರವು ತಿಲಕರನ್ನು ಬಂಧಿಸಲಾಯಿತು

**. ಅಸಹಕಾರ ಚಳುವಳಿಯನ್ನು ವಿವರಿಸಿ.** * ಗಾಂಧೀಜಿಯವರು 1920 ನಾಗ್ಪುರ ಕಾಂಗ್ರೆಸ್ ಅಧಿವೇಶನದ ನಿರ್ಣಯದಂತೆ ಬ್ರಿಟಿಷರ ವಿರುದ್ಧ ಅಸಹಕಾರ ಚಳುವಳಿಗೆ ಕರೆಯಿತ್ತರು. * ಗಾಂಧೀಜಿಯವರ ಕರೆಯನ್ನು ಬೆಂಬಲಿಸಿ ವಿದ್ಯಾರ್ಥಿಗಳು ಶಾಲಾಕಾಲೇಜುಗಳನ್ನು ವಕೀಲರು ನ್ಯಾಯಾಲಯಗಳನ್ನು ಬಹಿಷ್ಕರಿಸಿದರು. * ಭಾರತೀಯ ಗಣ್ಯರು ಬ್ರಿಟಿಷರು ನೀಡಿದ್ದ ಪುರಸ್ಕಾರಗಳನ್ನು ಹಿಂದಿರುಗಿಸಿದರು. * ಈ ಚಳುವಳಿಯನ್ನು ಬೆಂಬಲಿಸಿ ಮೋತಿಲಾಲ್ ನೆಹರು, ಸಿ.ಆರ್. ದಾಸ್ ತಮ್ಮ ವಕೀಲ ವೃತ್ತಿಯನ್ನು ತ್ಯಜಿಸಿದರು. * ಈ ಅವಧಿಯಲ್ಲಿ ಬ್ರಿಟನ್ ರಾಜಕುಮಾರನ ಭಾರತದ ಭೇಟಿಯನ್ನು ವಿರೋಧಿಸಿ ದೇಶಾದ್ಯಂತ ಹರತಾಳವನ್ನು ಆಚರಿಸಲಾಯಿತು. * ಅಸಹಕಾರ ಚಳುವಳಿಯ ಸ್ವರೂಪವನ್ನು ಮನಗಂಡ ಬ್ರಿಟಿಷ್ ಸರ್ಕಾರದಲ್ಲಿ ಆತಂಕದ ವಾತಾವರಣ ಉಂಟಾಯಿತು. *ಇಂತಹ ಸಂದರ್ಭದಲ್ಲಿ 1922ರಲ್ಲಿ ಉತ್ತರ ಪ್ರದೇಶದ ಚೌರಿಚೌರ ಎಂಬಲ್ಲಿ ಶಾಂತಿಯುತವಾಗಿ ಅಸಹಕಾರ ಚಳುವಳಿ ನಡೆಸುತ್ತಿದ್ದ ಚಳುವಳಿಗಾರರ ಮೇಲೆ ಪೋಲಿಸರು ಹಲ್ಲೆ ಮಾಡಿದರು. ಪರಿಣಾಮವಾಗಿ ಚಳುವಳಿ ಹಿಂಸಾರೂಪ ಪಡೆದು ಪೋಲಿಸರು ಗೋಲಿಬಾರ್ ನಡೆಸಿದರು. * ಇದರಿಂದ ರೊಚ್ಚಿಗೆದ್ದ ಜನರು ಪೋಲಿಸ್ ಠಾಣೆಗೆ ಬೆಂಕಿ ಹಚ್ಚಿ 22 ಜನ ಪೋಲಿಸರನ್ನು ಸಜೀವವಾಗಿ ದಹನ ಮಾಡಿದರು. ಈ ಘಟನೆಯನ್ನು ಇತಿಹಾಸದಲ್ಲಿ ಚೌರಿಚೌರ ಘಟನೆ ಎನ್ನುತಾರ್ರೆ. ಈ ಘಟನೆಯಿಂದ ಮನನೊಂದ ಗಾಂಧೀಜಿಯವರು ಅಸಹಕಾರ ಚಳುವಳಿಯನ್ನು ಹಿಂಪಡೆದರು.

* ಸರ್ಕಾರ ಈ ಹಿಂಸೆಗೆ ಗಾಂಧೀಜಿಯವರನ್ನು ಹೊಣೆಗಾರರನ್ನಾಗಿ ಮಾಡಿ ಅವರಿಗೆ 6 ವರ್ಷಗಳ ಕಾಲ ಸೆರಮನೆವಾಸದ ಶಿಕ್ಷೆ ವಿಧಿಸಿತು.

**ಕ್ವಿಟ್ ಇಂಡಿಯಾ ಚಳುವಳಿಯನ್ನು ವಿವರಿಸಿ** * 1942ರ ಕ್ರಿಪ್ಸ್ ಆಯೋಗದ ವರದಿಯ ಸಲಹೆಗಳನ್ನು ಕಾಂಗ್ರೆಸ್ ಒಪ್ಪದೇ ಕ್ವಿಟ್ ಇಂಡಿಯಾ ಚಳುವಳಿಗೆ ಕರೆ ನೀಡಿತು. * 'ಬ್ರಿಟಿಶರೇಭಾರತಬಿಟ್ಟ ತೊ-ಗಿ, ಎನ್ನುವುದು ಕ್ವಿಟ್ ಇಂಡಿಯಾ ಚಳುವಳಿಯ ಆಶಯವಾಗಿತ್ತು. * ಗಾಂಧೀಜಿಯವರು ದೇಲಿದ ಜನತೆಗೆ 'ಮಾಡು ಇಲ್ಲವೇಮಡಿ' ಎನ್ನುವ ಕರೆ ಕೊಟ್ಟರು. * ಬ್ರಿಟಿಷರು ಗಾಂಧೀಜಿ, ನೆಹರು, ರಾಜೇಂದ್ರಪ್ರಸಾದ್, ಅಬ್ದುಲ್ ಕಲಾಂ ಅಜಾದ್, ಸರ್ದಾರ್ವಲಬ್ಲ-ಭಾಯಿಪಟೇಲ್, ಆಚಾರ್ಯ ಕೃಪಲಾನಿಮೊದಲಾದವರನ್ನುಬಂಧಿಸಿದರು. *ಪರಿಣಾಮವಾಗಿ ಚಳುವಳಿಯ ನೇತೃತ್ವವನ್ನು ಜಯಪ್ರಕಾಶ ನಾರಾಯಣ್ರವರು ವಹಿಸಿಕೊಂಡರು. ಇದು ಎರಡನೇ ಹಂತದ ನಾಯಕರ ಬೆಳವಣಿಗೆಗೆ ಕಾರಣವಾಯಿತು. * ಆದರೆ ಕ್ವಿಟ್ ಇಂಡಿಯಾ ಚಳುವಳಿಯು ಯಶಸ್ವಿಯಾಗಲಿಲ್ಲ 1942ರ ಕ್ವಿಟ್ ಇಂಡಿಯಾ ಚಳುವಳಿಯು ಈ ಕೆಳಕಂಡ ಕಾರಣಗಳಿಂದ ವಿಫಲವಾಯಿತು * ಚಳುವಳಿಯ ಪ್ರಾರಂಭದಲ್ಲಿಯೇ ಎಲ್ಲಾ ಪ್ರಮುಖ ರಾಷ್ಟ್ರೀಯ ನಾಯಕರುಗಳನ್ನು ಬಂಧಿಸಲಾಯಿತು. ಇದರರಿಂದ ಮಾರ್ಗದರ್ಶಕರಿಲ್ಲದೇ ಈ ಚಳುವಳಿ ವಿಫಲವಾಯಿತು. * ಬ್ರಿಟಿಷ್ ಸೇವೆಯಲ್ಲಿದ್ದ ನೌಕರರು, ಅಧಿಕಾರಿಗಳು, ಜಮೀನ್ದಾರರು ಮತ್ತು ಹಲವು ಸಂಸ್ಥಾನಗಳ ರಾಜರು ಚಳುವಳಿಯಲ್ಲಿ ಭಾಗವಹಿಸದೇ ಬ್ರಿಟಿಷರ ಪರವಾಗಿ ಕೆಲಸ ಮಾಡಿದರು. * ಮುಸ್ಲಿಂಲೀಗ್ ಈ ಚಳುವಳಿಯಿಂದ ದೂರವೇ ಉಳಿಯಿತು. * ಆಡಳಿತ ಸೂತ್ರ, ಪೋಲಿಸ್ ವ್ಯವಸ್ಥೆ ಮತ್ತು ಸೈನಿಕ ವ್ಯವಸ್ಥೆಯ ಮೂಲಕ ಬ್ರಿಟಿಷರು ಈ ಚಳುವಳಿಯನ್ನು ಹತ್ತಿಕ್ಕಿದರು.

**ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿಯವರ ಪಾತ್ರವನ್ನು ವಿವರಿಸಿರಿ.** * 1920 ರಿಂದ 1947 ರ ಅವಧಿಯನ್ನು 'ಗಾಂಧಿ ಯುಗ' ಎಂದು ಕರೆಯುತಾರ್ರೆ. * ಗಾಂಧೀಜಿಯವರು ತಮ್ಮಹೋರಾಟದಲ್ಲಿ ಅಹಿಂಸೆಮತ್ತುಸತ್ಯಾಗ್ರಹವನ್ನುಪ್ರಮುಖ ಅಸ್ತ್ರವಾಗಿ ಬಳಸಿಕೊಂಡರು. *ಮುಸ್ಲೀಮರಸಹಭಾಗಿತ್ವಕ್ಕಾಗಿ ಖಿಲಾಫತ್ ಚಳುವಳಿಬೆಂಬಲಿಸಿದರು. * 1920ರಲ್ಲಗಾಂಧೀಜಿಯವರು ಬ್ರಿಟೀಶರ ವಿರುದ್ಧ ಅಸಹಾಕಾರ ಚಳುವಳಿಗೆ ಕರೆಯಿತ್ತರು.



SAVI BALAGA MANDYA

*ಬ್ರಿಟೀಶಿರುನೀಡಿದ್ದಪುರಸ್ಕಾರಗಳನ್ನುಹಿಂದಿರುಗಿಷದರು. * 1930 ರಲ್ಲಬ್ರಿಟೀಶಿರವಿರುದ್ಧ ಕಾನೂನುಭಂಗ ಚಳುವಳಿಯನ್ನು ಆರಂಭಿಸಿದರು* ತಮ್ಮ ಆಶ್ರಮಸಬರಮತಿಯಿಂದ ತೀರದ ದಂಡಿಯವರೆಗೆ ತಮ್ಮ ಅನುಯಾಯಿಗಳೊಂದಿಗೆ ಕಾಲ್ನಡಿಗೆಯಲ್ಲಿ ನಡೆದು ಹಿಡಿ ಉಪ್ಪು ತಯಾರಿಸಿ ಜನರಿಗೆ ವಿತರಿಸಿದರು. * ಬ್ರಿಟೀಶಿರೇ 'ಭಾರತಬಿಟ್ಟು ತೊ-ಗಿ' ಚಳುವಳಿಮೂಲಕಭಾರತೀಯರಿಗೆ'ಮಾಡು ಇ-ಲ್ವೇಮಡಿ' ಎನ್ನುವ ಕರೆನೀಡಿದರು. * 1947 ರಲ್ಲಿಭಾರತಕ್ಕೆಸ್ವಾತಂತ್ರ್ಯ ತಂದು ಕೊಡುವುದರ ಮೂ-ಕ'ರಾಷ್ಟ್ರಿಪಿತ' ಎಂದುಪ್ರಷದ್ಧರಾದರು.

**. ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸರ ಪಾತ್ರವನ್ನುವಿವರಿಸಿ.** * ಭಾರತೀಯರಿಂದ ನೇತಾಜಿಯೆಂದು ಪ್ರೀತಿಯಿಂದ ಕರೆಯಲ್ಪಡುವ ಸುಭಾಷ್ ಚಂದ್ರ ಬೋಸ್‌ರವರು ಭಾರತ ಮಾತೆಯ ಸ್ವಾತಂತ್ರ್ಯಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟರು. * ಐ.ಸಿ.ಎಸ್. ಪರೀಕ್ಷೆಯಲ್ಲಿ 4ನೇ ರ್‍ಯಾಂಕ್ ಗಳಿಸಿದರೂ ಬ್ರಿಟಿಷ್ ಸರ್ಕಾರದ ಸೇವೆಗೆ ಸೇರದೇ ರಾಷ್ಟ್ರೀಯ ಕಾಂಗ್ರೆಸ್ ಸೇರಿ ಗಾಂಧೀಜಿಯವರೊಂದಿಗೆ ಸ್ವಾತಂತ್ರ್ಯ ಚಳುವಳಿಗೆ ಧುಮುಕಿದರು. * ಗಾಂಧೀಜಿಯವರೊಂದಿಗೆ ತಾತ್ವಿಕ ಭಿನ್ನಾಭಿಪ್ರಾಯವನ್ನು ಹೊಂದಿದ ನೇತಾಜಿ ಕಾಂಗ್ರೆಸ್ ಪಕ್ಷವನ್ನು ತ್ಯಜಿಸಿ ಫಾರ್ವರ್ಡ್ ಬ್ಲಾಕ್ ಎಂಬ ಪಕ್ಷವನ್ನು ಸ್ಥಾಪಿಸಿ ತಮ್ಮ ಹೋರಾಟವನ್ನು ಮುಂದುವರೆಸಿದರು.* ಎರಡನೇ ಮಹಾಯುದ್ಧದಲ್ಲಿ ಭಾರತದ ಪಾಲ್ಗೊಳ್ಳುವಿಕೆಯನ್ನು ಸುಭಾಷರು ವಿರೋಧಿಸಿದರು. ಪರಿಣಾಮವಾಗಿ ಸುಭಾಷರನ್ನು ಗೃಹ ಬಂಧನದಲ್ಲಿ ಇಡಲಾಯಿತು. *ಅಲ್ಲಿಂ ದ ತಪ್ಪಿಸಿಕೊಂಡು ಜರ್ಮನಿಗೆ ತೆರಳಿ ಹಿಟ್ಲರ್ನ ಸಹಾಯದಿಂದ ಜಪಾನ್ ತಲುಪಿದರು * ರಾಸ್ ಬಿಹಾರಿ ಬೋಸ್ ಸ್ಥಾಪಿಸಿದ್ದ ಐ.ಎನ್.ಎ. ಸೈನ್ಯವನ್ನು ಸಂಘಟಿಸಿ ಜಪಾನ್‌ನ ಸಹಾಯದಿಂದ ಬ್ರಿಟಿಷರ ವಿರುದ್ಧ ಯುದ್ಧಕ್ಕಿಳಿದರು. *ದೆಹಲಿ ಚಲೋ ಎಂದು ನೇತಾಜಿ ಕರೆ ಕೊಟ್ಟರು. ಐ.ಎನ್.ಎ. ಸೈನ್ಯವು ಅಂಡಮಾನ್ ಮತ್ತು ನಿಕೋಬಾರ್‌ಗಳನ್ನು ಗೆದ್ದು ಈಶಾನ್ಯ ರಾಜ್ಯಗಳ ಕಡೆಗೆ ಮುನ್ನಡೆಯಿತು. * ಆದರೆ ಇದೇ ವೇಳೆ ಸುಭಾಷರು ಆಕಸ್ಮಿಕವಾಗಿ ವಿಮಾನ ಅಪಘಾತದಲ್ಲಿ ಮರಣ ಹೊಂದಿದರು. ಮುಂದೆ ಐ.ಎನ್.ಎ. ಸೈನ್ಯ ಬ್ರಿಟಿಷರಿಗೆ ಸೋತಿತು. * ಸುಭಾಷ್ ಚಂದ್ರ ಬೋಸರು ತಮ್ಮ ಹೋರಾಟ ಮತ್ತು ಸ್ಫೂರ್ತಿಯ ಮೂಲಕ ಕೋಟ್ಯಾಂತರ ಭಾರತೀಯರ ಮನಸ್ಸಿನಲ್ಲಿ ಅಜರಾಮಾರವಾಗಿದ್ದಾರೆ.

**ನೆಹರುರವರು ಪ್ರಧಾನ ಮಂತ್ರಿಯಾದ ನಂತರ ರಾಷ್ಟ್ರಕ್ಕೆ ನೀಡಿದ ಪ್ರಮುಖ ಕೊಡುಗೆಗಳನ್ನು ವಿವರಿಸಿ.** * ಜವಹರ್ ಲಾಲ್ ನೆಹರುರವರು ಭಾರತದ ಪ್ರಥಮ ಪ್ರಧಾನ ಮಂತ್ರಿಯಾಗಿದ್ದು, ಉತ್ತಮ ಆಡಳಿತದ ಮೂಲಕ ನವ ಭಾರತದ ಶಿಲ್ಪಿ ಎಂದು ಕರೆಯಲ್ಪಟ್ಟಿದ್ದಾರೆ. ನೆಹರುರವರು ಪ್ರಧಾನ ಮಂತ್ರಿಯಾದ ನಂತರ ರಾಷ್ಟ್ರಕ್ಕೆ ನೀಡಿದ ಪ್ರಮುಖ ಕೊಡುಗೆಗಳನ್ನು ಈ ಕೆಳಗಿನಂತೆ ವಿವರಿಸಬಹುದು. *ನೆಹರುರವರು ಸರ್ದಾರ್ ವಲ್ಲಭ ಭಾಯಿ ಪಟೇಲ್‌ರವರ ಸಹಾಯದಿಂದ ಸಮಾರು 562 ದೇಶೀಯ ಸಂಸ್ಥಾನಗಳನ್ನು ಭಾರತದ ಒಕ್ಕೂಟಕ್ಕೆ ಸೇರಿಸುವಲ್ಲಿ ಯಶಸ್ವಿಯಾದರು. * ಅಖಂಡ ಭಾರತವನ್ನು ಪ್ರಜಾಪ್ರಭುತ್ವದ ತಳಹದಿಯ ಮೇಲೆ ಭಾಷಾವಾರು ಪ್ರಾಂತ್ಯಗಳನ್ನಾಗಿ ವಿಂಗಡಿಸಿ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ನಡುವೆ ಅಧಿಕಾರವನ್ನು ಹಂಚಿದರು. * ನೆಹರುರವರು ಭಾರತದಲ್ಲಿ ಸಮಾಜವಾದಿ ಹಾಗೂ ಬಂಡವಾಳ ಶಾಹಿ ತತ್ವಗಳನ್ನು ಒಳಗೊಂಡ ಮಿಶ್ರ ಆರ್ಥಿಕತೆಗೆ ಭದ್ರ ಬುನಾದಿಯನ್ನು ಹಾಕಿದರು. * ದೇಶದ ಸಮಗ್ರ ಅಭಿವೃದ್ಧಿಗಾಗಿ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೆ ತಂದರು. * ಕೃಷಿ, ವಿದ್ಯುತ್ ಮೊದಲಾದ ಕ್ಷೇತ್ರಗಳ ಅಭಿವೃದ್ಧಿಗಾಗಿ ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳನ್ನು ಜಾರಿಗೆ ತಂದರು. * ಕೈಗಾರಿಕೆಗಳ ಅಭಿವೃದ್ಧಿಯಿಂದ ಪ್ರಗತಿ ಸಾಧ್ಯವೆಂದು ಕೈಗಾರಿಕೆಗಳ ಸ್ಥಾಪನೆ ಮತ್ತು ಅಭಿವೃದ್ಧಿಗೆ ಶ್ರಮಿಸಿದರು. * ಗ್ರಾಮೀಣಾಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನುಜಾರಿಗೊಳಿಸಿದರು. * ಭಾರತದ ವಿದೇಶಾಂಗ ನೀತಿಯ ಶಿಲ್ಪಿಯಾದ ನೆಹರುರವರು ಪಂಚಶೀಲ ತತ್ವ ಮತ್ತು ಅಲಿಪ್ತ ನೀತಿಯನ್ನು ಬೆಂಬಲಿಸಿದರು.

**. ಅಸ್ಪೃಶ್ಯತೆಯ ನಿವಾರಣೆಗೆ ಅಂಬೇಡ್ಕರ್ ನಡೆಸಿದ ಹೋರಾಟವನ್ನು ವಿವರಿಸಿ.** * ಭಾರತದ ಆಧುನಿಕ ಮನು ಎಂದು ಕರೆಯಲ್ಪಡುವ ಡಾ. ಬಿ.ಆರ್.

ಅಂಬೇಡ್ಕರ್‌ರವರು ಭಾರತದಲ್ಲಿನ ಅಸ್ಪೃಶ್ಯತೆಯ ನಿವಾರಣೆಗಾಗಿ ಮಾಡಿದ ಹೋರಾಟ ಸ್ಮರಣೀಯವಾದುದು. * ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿಯೇ ಮನುಷ್ಯನಿಗೆ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ದೊರೆಯದಿದ್ದರೆ ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲವೆಂದು ಪ್ರತಿಪಾದಿಸಿದರು. * ಆದುದರಿಂದ ಅಸ್ಪೃಶ್ಯರನ್ನು ಸಮಾಜದ ಮುಖ್ಯ ಭೂಮಿಕೆಗೆ ತರಲು ಶ್ರಮಿಸಿದರು. ಈ ನಿಟ್ಟಿನಲ್ಲಿ ಮಹರ್ ಮತ್ತು ಕಾಲಾರಾಂ ಚಳುವಳಿಯನ್ನು ರೂಪಿಸಿದರು. * ಗಾಂಧೀಜಿಯವರೊಂದಿಗೆ ಪೂನಾ ಒಪ್ಪಂದವನ್ನು ಮಾಡಿಕೊಂಡು ಚುನಾವಣಾ ಕ್ಷೇತ್ರಗಳಲ್ಲಿ ಮೀಸಲಾತಿಯನ್ನು ಪಡೆದರು. * ಡಾ. ಬಿ.ಆರ್. ಅಂಬೇಡ್ಕರ್‌ರವರು 'ಬಹಿಷ್ಕೃತಭಾರತ' ಎಂಬಸಂಘಟನೆಹಾಗೂ'ಸ್ವತಂತ್ರ ಕಾರ್ಮಿಕಪಕ್ಷ'ದಮೂ-ಕಶೋಷಿತರುಮತ್ತು ಕೃಷಿ ಕಾರ್ಮಿಕರನ್ನು ಸಂಘಟಿಸಿದರು. * 'ಪ್ರಭುದ್ಧಭಾರತ'ಜನತಾ'ಮತ್ತು'ಮೂಕನಾಯಕ' ಎಂಬಪತ್ರಿಕೆಗಳಮೂಲಕ ತಮ್ಮವಿಚಾರಧಾರೆಗಳನ್ನು ಜನರಿಗೆ ತಲುಪಿಸಿದರು. *ಭಾರತ ಸಂವಿಧಾನದ ಕರಡುಸಮಿತಿಯ ಅಧ್ಯಕ್ಷರಾಗಿದ್ದ ಡಾ. ಬಿ.ಆರ್. ಅಂಬೇಡ್ಕರ್‌ರವರು ಶೋಷಿತರಿಗಾಗಿ ಮೀಸಲಾತಿಯನ್ನು ಕಲ್ಪಿಸಿದರು. * ಭಾರತದ ಮೊದಲ ಕಾನೂನು ಮಂತ್ರಿಯಾಗಿದ್ದ ಇವರು ಅಸ್ಪೃಶ್ಯತೆಯ ನಿವಾರಣೆಗೆ ಕಾನೂನುಗಳನ್ನು ಜಾರಿಗೆ ತಂದರು. * ಇವರ ಜೀವಮಾನದ ಸಾಧನೆಗಾಗಿ ಭಾರತ ಸರ್ಕಾರವು ಇವರಿಗೆ ಮರಣೋತ್ತರವಾಗಿ 'ಭಾರತ ರತ್ನ'ಪ್ರಶಸ್ತಿ ಯನ್ನುನೀಡಿ ಗೌರವಿಸಿದೆ.

## 9.ಸ್ವಾತಂತ್ರೋತ್ತರ ಭಾರತ

**ಒಂದು ಅಂಕಗಳ ಪ್ರಶ್ನೆಗಳು:–**

1. **ಯಾವ ವರದಿಯನ್ನಾದರಿಸಿ ಭಾರತ ವಿಭಜನೆಯಾಯಿತು?** *** ಮೌಂಟ್ ಬ್ಯಾಟನ್ ವರದಿ**
2. **ಬಾರತದ ಪ್ರಥಮ ಪ್ರಧಾನ ಮಂತ್ರಿಯಾದವರ ಹೆಸರೇನು?** *** ಜವಹರ್‌ಲಾಲ್ ನೆಹರು**
3. **ಭಾರತದ ಸಂವಿಧಾನ ಎಂದಿನಿಂದ ಜಾರಿಯಾಯಿತು?** *** ಜನವರಿ 26, 1951**



SAVIBALAGAMANDYA

4. ಭಾರತದ ಪ್ರಥಮ ರಾಷ್ಟ್ರಾಧ್ಯಕ್ಷರ ಹೆಸರೇನು? * ಡಾ. ಬಾಬು ರಾಜೇಂದ್ರ ಪ್ರಸಾದ್
5. ಭಾರತ ಸಂವಿಧಾನದ 42ನೇ ತಿದ್ದುಪಡಿಯು ಯಾವ 2 ಅಂಶಗಳನ್ನು ಸಂವಿಧಾನಕ್ಕೆ ಸೇರಿಸಲಾಯಿತು? * ಜಾತ್ಯಾತೀತ ಮತ್ತು ಸಮಾಜವಾದ
6. ಭಾರತ ಸ್ವತಂತ್ರ್ಯಗೊಂಡಾಗ ದೇಶದಲ್ಲಿದ್ದ ಒಟ್ಟು ಸಂಸ್ಥಾನಗಳು ಎಷ್ಟು? * 562
7. ಭಾರತ ಒಕ್ಕೂಟದಲ್ಲಿ ವಿಲೀನವಾದ ರಾಜ್ಯದ ರಾಜರುಗಳಿಗೆ ಏನನ್ನು ಆಧರಿಸಿ ರಾಜಧನವನ್ನು ನಿಗಧಿಪಡಿಸಲಾಯಿತು? *ಆಯಾ ರಾಜ್ಯಾಧಾಯವನ್ನು ಆದರಿಸಿ
8. ಯಾರ ನೇತೃತ್ವದಲ್ಲಿ ಭಾರತದ ದೇಶೀಯ ಸಂಸ್ಥಾನಗಳು ವಿಲೀನಗೊಂಡವು? *ವಲ್ಲಭ ಭಾಯಿ ಪಟೇಲ್
9. ಭಾರತ ಒಕ್ಕೂಟದ ಪ್ರಥಮ ಗೃಹಮಂತ್ರಿಗಳಾರು? * ವಲ್ಲಭ ಭಾಯಿ ಪಟೇಲ್
10. ಜುನಾಗಢದ ಪ್ರಜೆಗಳು ಅಲ್ಲಿನ ನವಾಬರ ವಿರುದ್ಧ ಬೀದಿಗಿಳಿಯಲು ಕಾರಣವೇನು? * ಜುನಾಗಢದ ನವಾಬನು ಜುನಾಗಢವನ್ನು ಪಾಕಿಸ್ತಾನಕ್ಕೆ ಸೇರಿಸಲು ಇಚ್ಚಿಸಿದ್ದನ್ನು ವಿರೋಧಿಸಿ ಅಲ್ಲಿನ ಪ್ರಜೆಗಳು ನವಾಬರ ವಿರುದ್ಧ ಬೀದಿಗಿಳಿದರು.
11. ಜುನಾಗಢ ಸಂಸ್ಥಾನ ಭಾರತ ಒಕ್ಕೂಟದಲ್ಲಿ ಯಾವ ವರ್ಷ ವಿಲೀನವಾಯಿತು * 1949ರಲ್ಲಿ
12. ಹೈದರಾಬಾದಿನ ನಿಜಾಮನು ಭಾರತ ಒಕ್ಕೂಟ ಸೇರಲು ನಿರಾಕರಿಸಲು ಕಾರಣವೇನು? * ಸ್ವತಂತ್ರವಾಗುಳಿಯುವ ಉದ್ದೇಶದಿಂದ ಹೈದರಾಬಾದಿನ ನಿಜಾಮನು ಭಾರತ ಒಕ್ಕೂಟ ಸೇರಲು ನಿರಾಕರಿಸಿದನು.
13. ಹೈದರಾಬಾದ್ ಸಂಸ್ಥಾನ ಭಾರತ ಒಕ್ಕೂಟದಲ್ಲಿ ಯಾವಾಗ ವಿಲೀನವಾಯಿತು? * 1948ರಲ್ಲಿ
14. ಭಾರತ ಸ್ವತಂತ್ರವಾದ ಸಂದರ್ಭದಲ್ಲಿ ಜಮ್ಮು–ಕಾಶ್ಮೀರವನ್ನು ಯಾರು ಆಳುತ್ತಿದ್ದರು? * ಮಹಾರಾಜ ಹರಿಸಿಂಗ್
15. ಕಾಶ್ಮೀರದ ಸ್ವತಂತ್ರಕ್ಕಾಗಿ ಹೋರಾಟ ಮಾಡಿದ ರಾಜಕೀಯ ಪಕ್ಷ ಯಾವುದು? * ರಾಷ್ಟ್ರೀಯ ಸಮ್ಮೇಳನ(ನ್ಯಾಷನಲ್ ಕಾನ್ಫರೆನ್ಸ್) ಪಕ್ಷ
16. ಯಾವ ಪ್ರದೇಶವನ್ನು 'ಪಾಕ್ ಆಕ್ರಮಿತ ಕಾಶ್ಮೀರ' ಎಂದು ಕರೆಯಲಾಗುತ್ತದೆ? * ಪಾಕಿಸ್ತಾನ ಆಕ್ರಮಿಸಿರುವ ಕಾಶ್ಮೀರದ ವಾಯುವ್ಯ ಪ್ರದೇಶವನ್ನು 'ಪಾಕ್ ಆಕ್ರಮಿತ ಕಾಶ್ಮೀರ' ಎಂದು ಕರೆಯಲಾಗುತ್ತದೆ
17. ಸ್ವತಂತ್ರ್ಯಾ ನಂತರವೂ ಫ್ರೆಂಚರ ವಸಾಹತುಗಳಾಗಿ ಉಳಿದಿದ್ದ ಪ್ರದೇಶಗಳಾವುವು? * ಪಾಂಡಿಚೇರಿ, ಕಾರೈಕಲ್, ಮಾಹೆ ಮತ್ತು ಚಂದ್ರನಗರಗಳು.
18. ಫ್ರೆಂಚರ ವಶದಲ್ಲಿದ್ದ ಪ್ರದೇಶಗಳು ಯಾವಾಗ ಭಾರತದೊಂದಿಗೆ ವಿಲೀನಗೊಂಡವು? * 1954ರಲ್ಲಿ
19. ಗೋವ ಯಾವಾಗ ಭಾರತದೊಂದಿಗೆ ವಿಲೀನವಾಯಿತು? * 1961
20. ಆಂಧ್ರರಾಜ್ಯ ರಚನೆಗಾಗಿ ಆಗ್ರಹಿಸಿ ಸತ್ಯಾಗ್ರಹ ನಡೆಸಿ ಅಸುನೀಗಿದವರಾರು? * ಪೊಟ್ಟಿ ಶ್ರೀರಾಮುಲು
21. ರಾಜ್ಯ ಪುನರ್ವಿಂಗಡಣಾ ಆಯೋಗದ ಅಧ್ಯಕ್ಷರ ಹೆಸರೇನು? * ಫಜಲ್ ಅಲಿ
22. ಭಾರತದಲ್ಲಿ ರಚನೆಯಾದ ಮೊದಲ ಭಾಷಾವಾರು ರಾಜ್ಯ ಯಾವುದು? * ಆಂಧ್ರ ಪ್ರದೇಶ
23. ರಾಜ್ಯ ಪುನರ್ವಿಂಗಡಣಾ ಕಾನೂನು ಯಾವಾಗ ಜಾರಿಗೆ ಬಂದಿತು? * 956ರಲ್ಲಿ
24. ಮೈಸೂರು ರಾಜ್ಯವು ಯಾವಾಗ ಅಸ್ತಿತ್ವಕ್ಕೆ ಬಂದಿತು? * 1956 ನವಂಬರ್ 1 ರಂದು
25. ಮೈಸೂರು ರಾಜ್ಯವು 'ಕರ್ನಾಟಕ' ಎಂದು ಯಾವಾಗಮರುನಾಮಕರಣಗೊಂಡಿತು? * 1973ರಲ್ಲಿ
26. ಷೇಕ್ ಅಬ್ದುಲ್ಲಾ ಭಾರತದೊಂದಿಗೆ ಕಾಶ್ಮೀರವನ್ನು ವಿಲೀನೀಕರಣಗೊಳಿಸಲು ನಿರ್ಧರಿಸಿದ್ದು ಏಕೆ?
ಧಾರ್ಮಿಕ ಸಂವಿಧಾನವನ್ನೊಂದಿರುವ ಪಾಕಿಸ್ತಾನಕ್ಕಿಂತ, ಪ್ರಜಾಪ್ರಭುತ್ವ ಗಣರಾಜ್ಯವನ್ನೊಂದಿರುವ ಭಾರತದೊಂದಿಗೆ ವಿಲೀನಗೊಳ್ಳುವುದೇ ಉತ್ತಮವೆಂದು, ಷೇಕ್ ಅಬ್ದುಲ್ಲಾ ಭಾರತದೊಂದಿಗೆ ಕಾಶ್ಮೀರವನ್ನು ವಿಲೀನೀಕರಣಗೊಳಿಸಲು ನಿರ್ಧರಿಸಿದನು.

ಎರಡು ಅಂಕದ ಪ್ರಶ್ನೆಗಳು :–

1. ಭಾರತದ ಸ್ವತಂತ್ರದೊಂದಿಗೆ ಹುಟ್ಟಿಕೊಂಡ ಸಮಸ್ಯೆಗಳಾವುವು?
ನಿರಾಶ್ರಿತರ ಸಮಸ್ಯೆ, ಕೋಮುಗಲಭೆ, ಸರ್ಕಾರದ ರಚನೆ, ದೇಶೀಯ ಸಂಸ್ಥಾನಗಳ ವಿಲೀನೀಕರಣ, ಆಹಾರದ ಕೊರತೆ, ಮೊದಲಾದವು

2 ಭಾರತ ವಿಭಜನೆ ಸೃಷ್ಟಿಸಿದ ಸಮಸ್ಯೆಗಳಾವುವು?

1. ಭಾರತದಿಂದ ಪಾಕಿಸ್ತಾನಕ್ಕೆ, ಪಾಕಿಸ್ತಾನದಿಂದ ಭಾರತಕ್ಕೆಲಕ್ಷಾಂತರ ಜನರು ವಲಸೆ ಹೋಗಬೇಕಾಯಿತು
2. ಈ ರೀತಿ ನಿರಾಶ್ರಿತರಾದ ಜನರಿಗೆ ವಸತಿ, ಉದ್ಯೋಗ, ಭೂಮಿ, ಶಿಕ್ಷಣ, ಆರೋಗ್ಯ ಇತ್ಯಾದಿಗಳನ್ನು ಒದಗಿಸಬೇಕಾಯಿತು.

3 ದೇಶೀಯ ಸಂಸ್ಥಾನಗಳಿಗೆ ಸ್ವತಂತ್ರ ನೀಡಿ ಅವುಗಳ ಮುಂದೆ ಬ್ರಿಟಿಷರು ತೆರೆದಿಟ್ಟ 3 ಅವಕಾಶಗಳಾವುವು?

1. ಭಾರತ ಒಕ್ಕೂಟಕ್ಕೆ ಸೇರುವುದು
2. ಪಾಕಿಸ್ತಾನಕ್ಕೆ ಸೇರುವುದು
3. ಯಾವುದೇ ದೇಶಕ್ಕೆ ಸೇರ್ಪಡೆಯಾಗದೆ ಸ್ವತಂತ್ರರಾಗುಳಿಯುವುದು.

SAVI BALAGA MANDYA

4ದೇಶೀಯ ಸಂಸ್ಥಾನಗಳ ವಿಲಿನೀಕರಣ ಪ್ರಕ್ರಿಯೆಯಲ್ಲಿ ವಲ್ಲಭಭಾಯಿ ಪಟೇಲರ ಪಾತ್ರವೇನು?

1. ವಿಲೀನಿಕರಣ ಪ್ರಕ್ರಿಯೆಯಲ್ಲಿ ಜುನಾಗಢ, ಹೈದರಾಬಾದ್ ಮತ್ತು ಜಮ್ಮು ಕಾಶ್ಮೀರ ಸಂಸ್ಥಾನಗಳು ತೀವ್ರ ಪ್ರತಿರೋಧ ತೋರಿದವು.
2. ವಲ್ಲಭಭಾಯಿ ಪಟೇಲರು ತೀವ್ರ ಮತ್ತು ಸೂಕ್ತ ಕ್ರಮಗಳನ್ನು ಅನುಸರಿಸಿ ವಿಲೀನಕರಣ ಪ್ರಕ್ರಿಯೆಯನ್ನು ಯಶಸ್ವಿಯಾಗಿ ನಿರ್ವಹಿಸಿದರು.

5 ಭಾರತದ ಉಕ್ಕಿನ ಮನುಷ್ಯ ಎಂದು ಯಾರನ್ನು ಕರೆಯುತ್ತಾರೆ? ಏಕೆ?

1.ವಲ್ಲಭ ಭಾಯಿ ಪಟೇಲರನ್ನು ಭಾರತದ ಉಕ್ಕಿನ ಮನುಷ್ಯ ಎಂದು ಕರೆಯುತ್ತಾರೆ.
2.ಸಂಸ್ಥಾನಗಳ ವಿಲೀನಕರಣವನ್ನು ಕಠಿನ ನಿರ್ಧಾರಗಳೊಂದಿಗೆ ಯಶಸ್ವಿಯಾಗಿ ನಿರ್ವಹಿಸಿದ್ದರಿಂದ ಅವರನ್ನು ಹಾಗೆಂದು ಕರೆಯಲಾಗುತ್ತದೆ.

6 ಜುನಾಗಡ ಸಂಸ್ಥಾನ ಹೇಗೆ ಭಾರತದೊಂದಿಗೆ ವಿಲೀನವಾಯಿತು?

ಜುನಾಗಢದ ನವಾಬನು ಜುನಾಗಢವನ್ನು ಪಾಕಿಸ್ತಾನಕ್ಕೆ ಸೇರಿಸಲು ಇಚ್ಛಿಸಿದ್ದನು. ಇದನ್ನು ವಿರೋಧಿಸಿ ಅಲ್ಲಿನ ಪ್ರಜೆಗಳು ನವಾಬರ ವಿರುದ್ಧ ಬೀದಿಗಿಳಿದರು. ಇದನ್ನು ಎದುರಿಸಲಾಗದ ನವಾಬನು ಪಾಕಿಸ್ತಾನಕ್ಕೆ ಪಲಾಯನ ಮಾಡಿದನು. ಅಲ್ಲಿನ ದಿವಾನನ ಮನವಿಯಂತೆ ಶಾಂತಿ ಸ್ಥಾಪಿಸಿ, 1949ರಲ್ಲಿ ಭಾರತ ಒಕ್ಕೂಟಕ್ಕೆ ಸೇರ್ಪಡೆ ಮಾಡಿಕೊಳ್ಳಲಾಯಿತು.

7 ಹೈದರಾಬಾದ್ ಸಂಸ್ಥಾನ ಭಾರತದೊಂದಿಗೆ ಹೇಗೆ ವಿಲೀನಗೊಂಡಿತು?
ನಿಜಾಮನು ಸ್ವತಂತ್ರವಾಗುಳಿಯುವ ಉದ್ದೇಶದಿಂದ ಭಾರತದೊಂದಿಗೆ ಸೇರಲು ನಿರಾಕರಿಸಿದನು.
ನಿಜಾಮನ ವಿರುದ್ಧ ಕಮ್ಯುನಿಸ್ಟ್‌ರ ನೇತೃತ್ವದಲ್ಲಿ ತೆಲಂಗಾಣ ರೈತರ ಹೋರಾಟ ನಡೆಯುತ್ತಿತ್ತು.
ಜನರ ಹೋರಾಟವನ್ನು ನಿಜಾಮನ ಕ್ರೂರ ಪಡೆ ರಜಾಕಾರರು ಕ್ರೂರವಾಗಿ ಹತ್ತಿಕ್ಕಲು ಪ್ರಯತ್ನಿಸುತ್ತಿತ್ತು. ಆಗ ಭಾರತ ಸರ್ಕಾರ ಸೈನ್ಯವನ್ನು ಕಳುಹಿಸಿ ನಿಜಾಮನ್ನು ಸೋಲಿಸಿ 1948ರಲ್ಲಿ ಹೈದರಾಬಾದ್ ಸಂಸ್ಥಾನವನ್ನು ಭಾರತ ಒಕ್ಕೂಟದೊಂದಿಗೆ ವಿಲೀನಗೊಂಡಿತು.

## 10. 20ನೇ ಶತಮಾನದ ರಾಜಕೀಯ ಆಯಾಮಗಳು

ಒಂದು ಅಂಕಗಳ ಪ್ರಶ್ನೆಗಳು:–

1. ಯುರೋಪಿನ ದೇಶಗಳಲ್ಲಿ ತೀವ್ರವಾದ ಪೈಪೋಟಿಯನ್ನು ಸೃಷ್ಟಿಸಿದ ಅಂಶಗಳು ಯಾವುವು?
ಕೈಗಾರಿಕಾ ಕ್ರಾಂತಿ ಮತ್ತು ನೂತನ ಆವಿಷ್ಕಾರಗಳು
2. ಕದನ ಬಾಂಧವ್ಯತ್ರಯಗಳು ಯಾವುವು?
ಬ್ರಿಟನ್, ಫ್ರಾನ್ಸ್, ಮತ್ತು ರಷ್ಯಾ
3. ಕದನ ಸೌಹಾರ್ಧತ್ರಯಗಳು ಯಾವುವು?
ಜರ್ಮನಿ, ಆಸ್ಟ್ರಿಯಾ–ಹಂಗೇರಿ ಮತ್ತು ಇಟಲಿ
4. ಮೊದಲ ಮಹಾಯುದ್ಧ ಪ್ರಾರಂಭವಾಗಲು ಇದ್ದ ತಕ್ಷಣದ ಕಾರಣವೇನು?
ಆಸ್ಟ್ರಿಯಾದ ರಾಜಕುಮಾರ ಆರ್ಕ್‌ಡ್ಯೂಕ್ ಫ್ರಾನ್ಸಿಸ್ ಫರ್ಡಿನೆಂಡ್‌ನ ಹತ್ಯೆಯಾದುದು ಮೊದಲ ಮಹಾಯುದ್ಧ ಪ್ರಾರಂಭವಾಗಲು ಇದ್ದ ತಕ್ಷಣದ ಕಾರಣ.
5. ರಷ್ಯಾದಲ್ಲಿ ಸಮಾಜವಾದಿ ಕ್ರಾಂತಿ ಯಾವಾಗ ಉಂಟಾಯಿತು?1917ರಲ್ಲಿ
6. ಮೊದಲನೇ ಮಹಾಯುದ್ಧವು ಯಾವ ಒಪ್ಪಂದದೊಂದಿಗೆ ಅಂತ್ಯಗೊಂಡಿತು?ವರ್ಸೈಲ್ಸ್ ಒಪ್ಪಂದದೊಂದಿಗೆ.
7. ಮೊದಲನೇ ಮಹಾಯುದ್ಧದ ನಂತರ ಶಾಂತಿ ಸ್ಥಾಪನೆಯ ಉದ್ದೇಶದಿಂದ ಸ್ಥಾಪಿತವಾದ ಸಂಸ್ಥೆ ಯಾವುದು?ರಾಷ್ಟ್ರಗಳ ಸಂಘ (ಲೀಗ್ ಆಫ್ ನೇಷನ್ಸ್)
8. 19ನೇ ಶತಮಾನದಲ್ಲಿ ರಷ್ಯಾವನ್ನು ಆಳುತ್ತಿದ್ದವರು ಯಾರು?ಝಾರ್ ದೊರೆಗಳು
9. ವಿಸ್ತೀರ್ಣದಲ್ಲಿ ಜಗತ್ತಿನಲ್ಲೇ ದೊಡ್ಡ ದೇಶ ಯಾವುದು?ರಷ್ಯಾ
10. 1905ರಲ್ಲಿ ರಷ್ಯಾವನ್ನು ಯಾವ ದೇಶ ಸೋಲಿಸಿತು?ಜಪಾನ್
11. ರಷ್ಯಾದಲ್ಲಿ ರೈತರು ಮತ್ತು ಕಾರ್ಮಿಕರಿಗೆ ಕ್ರಾಂತಿಕಾರಿ ಮಾರ್ಗದರ್ಶನ ನೀಡಿದವರು ಯಾರು?
ಲೆನಿನ್
ರಷ್ಯಾವನ್ನು ಪ್ರಜಾಪ್ರಭುತ್ವ ಗಣರಾಜ್ಯವೆಂದು ಘೋಷಿಸಿದವರು ಯಾರು?
ಮೆನ್ಶವಿಕ್‌ರು
12. 'ಅಕ್ಟೋಬರ್ ಕ್ರಾಂತಿ' ಎಂದರೇನು?
ಲೆನಿನ್‌ನ ನೇತೃತ್ವದಲ್ಲಿ ಅಕ್ಟೋಬರ್ 1917ರಲ್ಲಿ ಸಂಭವಿಸಿದ ಸಮಾಜವಾದಿ ಕ್ರಾಂತಿಯನ್ನು ಅಕ್ಟೋಬರ್ ಕ್ರಾಂತಿ ಎನ್ನಲಾಗಿದೆ.

SAVI BALAGA MANDYA

13. ಸಮಾಜವಾದವನ್ನು ಮೊಟ್ಟಮೊದಲ ಬಾರಿಗೆ ಪ್ರಾಯೋಗಿಕವಾಗಿ ಜಾರಿ ಮಾಡಿದವರು ಯಾರು?
ಲೆನಿನ್ ಜಾರಿ ಮಾಡಿದನು.
14. ಯಾವ ದೇಶದಲ್ಲಿ ವೈಜ್ಞಾನಿಕ ಸಮಾಜವಾದ ಮೊಟ್ಟಮೊದಲ ಬಾರಿಗೆ ಅಸ್ತಿತ್ವಕ್ಕೆ ಬಂದಿತು
ರಷ್ಯಾದಲ್ಲಿ ಅಸ್ತಿತ್ವಕ್ಕೆ ಬಂದಿತು.
15. ರಷ್ಯಾವನ್ನು ಅಮೇರಿಕಾಕ್ಕೆ ಸವಾಲಾಗುವಂತೆ ಬೆಳೆಸಿದವರು ಯಾರು?
ಜೋಸೆಫ್ ಸ್ಟಾಲಿನ್
16. ರಷ್ಯಾದಲ್ಲಿ ಪಂಚವಾರ್ಷಿಕ ಯೋಜನೆಯನ್ನು ಜಾರಿಗೆ ತಂದವರು ಯಾರು?
ಜೋಸೆಫ್ ಸ್ಟಾಲಿನ್
17. ಮೊಟ್ಟಮೊದಲ ಮಾನವ ಸಹಿತ ಉಪಗ್ರಹ ಉಡಾವಣೆ ಮಾಡಿದ ದೇಶ ಯಾವುದು?
ರಷ್ಯಾ
18. ಮೊದಲ ಮಹಾಯುದ್ಧದ ನಂತರ ಜರ್ಮನಿಯಲ್ಲಿ ಸರ್ವಾಧಿಕಾರಿಯಾಗಿ ಉದಯಿಸಿದವರಾರು?
ಅಡಾಲ್ಫ ಹಿಟ್ಲರ್
19. ಹಿಟ್ಲರ್ ಜರ್ಮನಿಯಲ್ಲಿ ಸ್ಥಾಪಿಸಿದ ರಾಜಕೀಯ ಪಕ್ಷಯಾವುದು?
ನಾಜಿ ಪಕ್ಷ
20. ಹಿಟ್ಲರ್ ಗೋಬೆಲ್ಸ್ ಮಂತ್ರಿಯನ್ನು ನೇಮಕ ಮಾಡಿದ್ದೇಕೆ?
ಜನಾಂಗೀಯ ದ್ವೇಷವನ್ನು ಪ್ರಸಾರ ಮಾಡಲು.
21. ಹಿಟ್ಲರ್ ಸ್ಥಾಪಿಸಿದ ಕ್ರೌರ್ಯ ಪಡೆ ಯಾವುದು?
'ಬೂದು ಅಂಗಿ ದಳ'
22. 'ಹೋಲೋಕಾಸ್ಟ್' ಎಂದರೇನು?
ಹಿಟ್ಲರ್ ನಡೆಸಿದ ಸಾಮೂಹಿಕ ಕಗ್ಗೊಲೆಗಳನ್ನು 'ಹೋಲೋಕಾಸ್ಟ್' ಎಂದು ಕರೆಯಲಾಗಿದೆ.
23. ಮೊದಲ ಮಹಾಯುದ್ಧದ ನಂತರ ಇಟಲಿಯಲ್ಲಿ ಸರ್ವಾಧಿಕಾರಿಯಾಗಿ ಉದಯಿಸಿದವರಾರು?
ಮುಸಲೋನಿ
24. ಮುಸೋಲಿನಿ ಇಟಲಿಯಲ್ಲಿ ಸ್ಥಾಪಿಸಿದ ರಾಜಕೀಯ ಪಕ್ಷ ಯಾವುದು?
ರಾಷ್ಟ್ರೀಯ ಫ್ಯಾಸಿಸ್ಟ ಪಕ್ಷ.
25. 2ನೇ ಮಹಾಯುದ್ಧವು ಯಾವ ಘಟನೆಯೊಂದಿಗೆ ಆರಂಭವಾಯಿತು?
ಜರ್ಮನಿಯು ಪೋಲೆಂಡ್‌ನ ಮೇಲೆ ದಾಳಿ ನಡೆಸುವುದರೊಂದಿಗೆ 2ನೇ ಮಹಾಯುದ್ಧವು ಆರಂಭವಾಯಿತು.
26. 2ನೇ ಮಹಾಯುದ್ಧ ನಡೆದ ಅವಧಿಯನ್ನು ತಿಳಿಸಿ?
1939 ರಿಂದ 1945
27. 1930ರ ದಶಕದಲ್ಲಿ ಉಂಟಾದ ಮಹಾನ್ ಆರ್ಥಿಕ ಕುಸಿತಕ್ಕೆ ಕಾರಣವೇನು?
ಶ್ರೀಮಂತ ದೇಶಗಳು ಮೊದಲನೆಯ ಮಹಾಯುದ್ಧದಲ್ಲಿ ಹಣ ವ್ಯಯ ಮಾಡಿದ ಪರಿಣಾಮವಾಗಿ 1930ರ ದಶಕದಲ್ಲಿ ಉಂಟಾದ ಮಹಾನ್ ಆರ್ಥಿಕ ಕುಸಿತಕ್ಕೆ ಕಾರಣವಾಯಿತು.
28. 2ನೇ ಮಹಾಯುದ್ಧದಲ್ಲಿ ಮಿತ್ರ ಬಣದಲ್ಲಿದ್ದ ರಾಷ್ಟ್ರಗಳಾವುವು?
ಬ್ರಿಟನ್, ಫ್ರಾನ್ಸ್, ಮತ್ತು ರಷ್ಯಾಗಳು.
29. 2ನೇ ಮಹಾಯುದ್ಧದಲ್ಲಿ ಶತ್ರು ಬಣದಲ್ಲಿದ್ದ ರಾಷ್ಟ್ರಗಳಾವುವು?
ಜರ್ಮನಿ, ಇಟಲಿ ಮತ್ತು ಜಪಾನ್‌ಗಳು
30. ಅಮೇರಿಕಾ ಜಪಾನಿನ ಯಾವ 2 ನಗರಗಳ ಮೇಲೆ ಅಣು ಬಾಂಬ್ ದಾಳಿ ಮಾಡಿತು?
ಹಿರೋಷಿಮಾ ಮತ್ತು ನಾಗಸಾಕಿಗಳ ಮೇಲೆ
31. ಚೀನಾದಲ್ಲಿ ಯಾರ ನೇತೃತ್ವದಲ್ಲಿ ಪ್ರಜಾಪ್ರಭುತ್ವ ಕ್ರಾಂತಿ ನಡೆಯಿತು?
ಸನ್–ಯಾತ್–ಸೇನ್
32. ಸನ್–ಯಾತ್–ಸೇನ್ ಯಾವ ರಾಜಕೀಯ ಪಕ್ಷದ ನಾಯಕನಾಗಿದ್ದನು?
ಕ್ಯೂಮಿಟಾಂಗ್ ಪಕ್ಷ

SAVI BALAGA MANDYA

33. ‘ದೀರ್ಘಪಯಣ’ ಎಂದರೇನು?

ತಮ್ಮನ್ನು ರಕ್ಷಿಸಿಕೊಳ್ಳುವ ಸಲುವಾಗಿ ಮಾವೊತ್ಸೆ ತುಂಗನ ನೇತೃತ್ವದಲ್ಲಿ ಚೀನಾದ ಉತ್ತರ ಭಾಗಕ್ಕೆ ಕಮ್ಯುನಿಸ್ಟ್‌ರ ಸ್ಥಳಾಂತರವನ್ನು ‘ದೀರ್ಘಪಯಣ’ ಎಂದು ಕರೆಯಲಾಗಿದೆ.

34. ಚೀನಾದಲ್ಲಿ ಮುನ್ನಡೆಯ ಮಹಾಜಿಗಿತವನ್ನು ಜಾರಿಗೆ ತಂದವರು ಯಾರು?

ಮಾವೊತ್ಸೆ ತುಂಗ್

35. ‘ಶೀತಲಸಮರ’ ಎಂದರೇನು?

2ನೇ ಮಹಾಯುದ್ಧದ ನಂತರ ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಸೋವಿಯತ್ ರಷ್ಯಾ ಬಣಗಳ ನಡುವೆ ಉದ್ಭವಿಸಿದ ನಿರಂತರ ಭಯ, ದ್ವೇಷ ಅಸೂಯೆ ಮತ್ತು ಆತಂಕದ ಪರಿಸ್ಥಿತಿಯೇ ಶೀತಲ ಸಮರ.

36. ಅಮೇರಿಕಾ ದ್ವಿತೀಯ ಮಹಾಯುದ್ಧವನ್ನು ಪ್ರವೇಶಿಸಲು ಕಾರಣವಾದ ಘಟನೆ ಯಾವುದು?

ಜಪಾನ್ ಅಮೆರಿಕಾದ ನೌಕಾನೆಲೆ ಪರ್ಲ್‌ಹಾರ್ಬರ್ ಮೇಲೆ ನಡೆಸಿದ ದಾಳಿಯು ಅಮೇರಿಕಾ ದ್ವಿತೀಯ ಮಹಾಯುದ್ಧವನ್ನು ಪ್ರವೇಶಿಸಲು ಕಾರಣವಾಯಿತು.

. ಎರಡು ಅಂಕದ ಪ್ರಶ್ನೆಗಳು :-

1. ಮೊದಲ ಮಹಾಯುದ್ಧಕ್ಕೆ ಕಾರಣಗಳೇನು?

1.ಯುರೋಪಿನ ಪ್ರಬಲ ರಾಷ್ಟ್ರಗಳು ವಸಾಹತುಗಳ ಮೇಲೆ ಹಿಡಿತ ಸಾಧಿಸಲು ಮಾಡಿದ ನಿರಂತರ ಸಂಘರ್ಷ

2.ಕೈಗಾರಿಕಾ ಕ್ರಾಂತಿ ಮತ್ತು ನೂತನ ಆವಿಷ್ಕಾರಗಳು ಸೃಷ್ಟಿಸಿದ ತೀವ್ರ ಪೈಪೋಟಿ

3.ಸಂಕೀರ್ಣ ಒಪ್ಪಂದಗಳಿಂದಾದ ಶಕ್ತಿ ಅಸಮತೋಲನ

4.ಅತಿಯಾದ ರಾಷ್ಟ್ರೀಯತೆಯ ಬೆಳವಣಿಗೆ

5. ಅತಿಯಾದ ಮಿಲಿಟರಿಕರಣ 6. ಯುರೋಪ್ ಎರಡು ಶಕ್ತಿಬಣಗಳಾಗಿ ಹೋಳಾಗಿದ್ದು.

2. 19ನೇ ಶತಮಾನದಲ್ಲಿ ರಷ್ಯಾದ ಜನರು ಝಾರ್ ದೊರೆಗಳ ಆಳ್ವಿಕೆಯಿಂದ ಬೇಸರಗೊಳ್ಳಲು ಕಾರಣಗಳೇನು?

1.19ನೆಯ ಶತಮಾನದಲ್ಲಿ ರಷ್ಯಾವನ್ನು ಆಳುತ್ತಿದ್ದ ಝಾರ್ ದೊರೆಗಳು ತಮ್ಮ ಕೆಳಗಿನ ಕುಲೀನರು,ಜಮೀನ್ದಾರರು ರೈತರು ಮತ್ತು ಬಡವರನ್ನು ತೀವ್ರವಾಗಿ ಶೋಷಿಸುತ್ತಿದ್ದರು. 2.ಸಣ್ಣದಾಗಿ ಬೆಳೆಯುತ್ತಿದ್ದ ಬಂಡವಾಳದಾರರು ಕಾರ್ಮಿಕರನ್ನು ಮತ್ತುಇತರರನ್ನು ಶೋಷಿಸುತ್ತಿದ್ದರು.

3.1905ರಲ್ಲಿ ಜಪಾನ್‌ನಂತ ಪುಟ್ಟ ದೇಶ ರಷ್ಯಾವನ್ನು ಸೋಲಿಸಿದ್ದು_..... ಇತ್ಯಾದಿಗಳು.

3. ರಷ್ಯಾದ ಕ್ರಾಂತಿಯಲ್ಲಿ ಲೆನಿನ್ನನ ಪಾತ್ರವೇನು?

ಲೆನಿನ್ ರೈತರು ಮತ್ತು ಕಾರ್ಮಿಕರಿಗೆ ಕ್ರಾಂತಿಕಾರಿ ಮಾರ್ಗದರ್ಶನ ನೀಡಿದನು. ದೇಶಭ್ರಷ್ಟನಾಗಿದ್ದ ಲೆನಿನ್ ಮೆನ್ಶವಿಕ್ ಕ್ರಾಂತಿ ನಂತರ ಹಿಂತಿರುಗಿ ಜನರಿಗೆ ಸರಳವಾದ ‘ಶಾಂತಿ, ಆಹಾರ,ಭೂಮಿ’ ಎಂಬ ಜನಪರ ಘೋಷಣೆನೀಡಿದನು. ಇದಕ್ಕೆ ಕಾರ್ಮಿಕರುಮತ್ತು ಗ್ರಾಮೀಣ ಬಡವರುವ್ಯಾಪಕವಾಗಿ ಸ್ಪಂದಿಸಿದರು. ಮುಂದೆ ಬೋಲ್ಶವಿಕ್ ಕ್ರಾಂತಿ ಸಂಭವಿಸಿದಾಗ, ಲೆನಿನ್ ಕ್ರಾಂತಿ ಪಡೆ ಸೇರಿರಷ್ಯಾವನ್ನು ಸಮಾಜವಾದಿ ಗಣರಾಜ್ಯವಾಗಿ ಘೋಷಿಸಿದನು.

4. ರಷ್ಯಾದ ಅಧ್ಯಕ್ಷನಾಗಿ ಲೆನಿನ್ನನ ಸಾಧನೆಗಳಾವುವು?

1.ಲೆನಿನ್ ಅಧ್ಯಕ್ಷನಾದ ಕೂಡಲೇ ಭೂಮಿ ರೈತರಿಗೆ ಸೇರಿದ್ದುಎಂದು ಘೋಷಿಸಿದರನು. 2.ಎಲ್ಲ ರಷ್ಯನ್ನರಿಗೂ ಉಚಿತವಾದ ಶಿಕ್ಷಣ, ಕ್ರೀಡೆ, ಆರೋಗ್ಯ, ವಸತಿ ನೀಡುವಂತಹ ನೀತಿಗಳನ್ನು ಜಾರಿ ಮಾಡಿದನು.

3. ಕಾರ್ಲ್‌ಮಾರ್ಕ್ಸ್‌ನ ಸಮಾಜವಾದ ಚಿಂತನೆ ಮೊದಲ ಬಾರಿಗೆ ಪ್ರಾಯೋಗಿಕ ಜಾರಿಯಾಯಿತು.

5. ರಷ್ಯಾದ ಅಭಿವೃದ್ಧಿಗೆ ಸ್ಟಾಲಿನ್‌ನ ಕೊಡುಗೆಗಳಾವುವು?

1.ರಷ್ಯಾವನ್ನು ಅಮೇರಿಕಕ್ಕೆ ಸವಾಲಾಗುವಂತೆ ಬೆಳೆಸಿದನು.

2.ಪಂಚವಾರ್ಷಿಕ ಯೋಜನೆಗಳನ್ನು ಆರಂಭಿಸಿದನು.

3.ಮೊದಲ ಮಾನವ ಸಹಿತ ಉಪಗ್ರಹ ಉಡಾವಣೆಯಾಯಿತು

4.ಯೂರಿ ಗಗಾರಿನ್ ಜಗತ್ತಿನ ಮೊದಲ ಗಗನಯಾತ್ರಿಯಾದ.

6. ಸೋವಿಯತ್ ಒಕ್ಕೂಟದ ವಿಘಟನಗೆ ಕಾರಣಗಳೇನು?

1.ರಷ್ಯಾವನ್ನು ಬಲಿಷ್ಟಗೊಳಿಸುವ ಪ್ರಕ್ರಿಯೆಯಲ್ಲಿ ಸ್ಟಾಲಿನ್ ಹಲವಾರು ತಪ್ಪುಗಳನ್ನೆಸಗಿದನು.

2.ಪರಿಣಾಮವಾಗಿ ಕ್ರಾಂತಿಗೆ ವಿರುದ್ಧವಾದ ಶಕ್ತಿಗಳು ಪ್ರಬಲವಾದವು.

3.ಗೋರ್ಬಚೆವ್ ಗ್ಲಾಸನೋಸ್ತ ಮತ್ತು ಪೆರಸ್ಟ್ರೋಯಿಕ ಎಂಬ ಸುಧಾರಣೆಗಳನ್ನು ಜಾರಿಗೆ ತಂದನು.

4. ಪರಿಣಾಮವಾಗಿ ಸಮಾಜವಾದಿ ವ್ಯವಸ್ಥೆ ಕುಸಿದು, ಸೋವಿಯತ್ ಒಕ್ಕೂಟ ವಿಘಟನೆಯಾಯಿತು.

7. ಹಿಟ್ಲರ್ ಜರ್ಮನಿಯಲ್ಲಿ ಹೇಗೆ ಪ್ರಬಲನಾದನು?

1.ಪ್ರಾರಂಭದಲ್ಲಿ ಹಿಟ್ಲರ್ ಜರ್ಮನಿಯ ಛಾನ್ಸಲರ್ ಆದನು.

2.ನಂತರ ಅಧ್ಯಕ್ಷ ಹಿಂಡನ್‌ಬರ್ಗ್ ನಿಧನದ ನಂತರ ಜರ್ಮನಿಯ ಸರ್ವಾಧಿಕಾರಿಯಾದನು.

3.ಜರ್ಮನ್ ಉದ್ಯಮಿಗಳ ಬೆಂಬಲದೊಂದಿಗೆ ಕಮ್ಯುನಿಸ್ಟ್‌ರು ಸೋಷಿಯಲಿಸ್ಟ್‌ರನ್ನು ದಮನಿಸಿದನು.

4.ಕಾರ್ಮಿಕಸಂಘಗಳು, ಇತರ ರಾಜಕೀಯ ಪಕ್ಷಗಳನ್ನು ನಿಷೇದಿಸಿ, ನಾಜಿ ಪಕ್ಷ ಏಕೈಕ ರಾಜಕೀಯ ಪಕ್ಷವೆಂದು ಘೋಷಿಸಿದನು.

8. ನಾಜಿವಾದದ ಸಾರಾಂಶವೇನು?

1.ಜಗತ್ತಿನಲ್ಲಿ ಆರ್ಯ ಜರ್ಮನ್ ಜನಾಂಗ ಮಾತ್ರ ಶ್ರೇಷ್ಠವಾದ ಜನಾಂಗ ಎಂದು ಬಿಂಬಿಸುವುದು.

2.ಜಗತ್ತನ್ನು ಆಳಲು ಜರ್ಮನ್‌ರು ಮಾತ್ರ ಯೋಗ್ಯರು, ಉಳಿದ ಜನಾಂಗಗಳು ಆಳಿಸಿಕೊಳ್ಳಲು ಮಾತ್ರ ಯೋಗ್ಯರು.

3.ಜರ್ಮನಿಯ ಎಲ್ಲಾ ಸಮಸ್ಯೆಗಳಿಗೆ ಕ್ಯಾಥೋಲಿಕ್‌ರು, ಯಹೂದಿಗಳು, ಕಮ್ಯುನಿಸ್ಟರು, ಸೋಷಿಯಲಿಸ್ಟರು ಕಾರಣವೆಂದು ದೂಷಿಸಿದನು.

4.ಜರ್ಮನ್ ಉಗ್ರ ರಾಷ್ಟ್ರೀಯವಾದವನ್ನು ಅಮಾನುಷವಾದ ರೀತಿಯಲ್ಲಿ ಜಾರಿ

9. ಫ್ಯಾಸಿಸ್ಟ್‌ವಾದದ ಲಕ್ಷಣಗಳೇನು?

ಉಗ್ರ ರಾಷ್ಟ್ರೀಯವಾದ, ಪರಕೀಯ ಶಕ್ತಿಗಳ ನಾಶ, ಹಿಂಸೆಯ ವೈಭವೀಕರಣ, ಜನಾಂಗೀಯ ಶ್ರೇಷ್ಠತೆ, ಸಾಮ್ರಾಜ್ಯವಾದದ ವಿಸ್ತರಣೆ, ನರಮೇಧಗಳಿಗೆ ಬೆಂಬಲ–ಇವು ಫ್ಯಾಸಿಸ್ಟ್‌ವಾದದ ಲಕ್ಷಣಗಳು.

10. ಮುಸಲೋನಿ ಇಟಲಿಯಲ್ಲಿ ಹೇಗೆ ಫ್ಯಾಸಿಸ್ಟ್‌ವಾದವನ್ನು ಸ್ಥಾಪಿಸಿದನು?

1. ಇಟಲಿಯ ಪ್ರಧಾನಿಯಾಗಿ ಮುಸಲೋನಿ 'ರಾಷ್ಟ್ರೀಯಫ್ಯಾಸಿಸ್ಟ್‌ಪಕ್ಷ'ವನ್ನುಸ್ಥಾಪಿಸಿದನು.

2.ಇಟಲಿಯಲ್ಲಿ ಪ್ರಜಾಪ್ರಭುತ್ವ ವಿಸರ್ಜಿಸಿ, ಸರ್ವಾಧಿಕಾರಿಯಾದನು.

3.ಗುಪ್ತ ಪೋಲಿಸ್ ಪಡೆ ಸ್ಥಾಪಿಸಿ, ತನ್ನ ವಿರೋಧಿಗಳನ್ನು ನಾಶ ಮಾಡಿದನು.

4.ಕಾರ್ಮಿಕರ ಮುಷ್ಕರಗಳನ್ನು ನಿಷೇಧಿಸಿ, ಏಕಪಕ್ಷ ಸರ್ವಾಧಿಕಾರವನ್ನು ಸ್ಥಾಪಿಸಿದನು.

11. ಎರಡನೇ ಮಹಾಯುದ್ಧಕ್ಕಿದ್ದ ಕಾರಣಗಳಾವುವು?

1. 1930ರ ದಶಕದಲ್ಲಿ ಉಂಟಾದ ಆರ್ಥಿಕ ಕುಸಿತದಿಂದ ಜನರ ಜೀವನ ಮಟ್ಟ ತೀವ್ರವಾಗಿ ಕುಸಿದು, ಕೈಗಾರಿಕೆ ಮತ್ತು ಕೃಷಿ ಬೆಳವಣಿಗೆ ಸ್ಥಗಿತಗೊಂಡು ನಿರುದ್ಯೋಗ ವಿಪರೀತವಾಯಿತು.

2.ಮೊದಲ ಮಹಾಯುದ್ಧದ ಸೋಲು, ಅವಮಾನಕರ ಒಪ್ಪಂದಗಳು, ಅಪಾರವಾದ ನಷ್ಟಗಳ ಹಿನ್ನೆಲೆಯಲ್ಲಿ ಯುರೋಪಿನ ದೇಶಗಳಲ್ಲಿ ರಾಷ್ಟ್ರೀಯವಾದದ ಉಗ್ರತೆ ತೀವ್ರಗೊಂಡಿತು.

3.ಯುರೋಪಿನ ಕೈಗಾರಿಕೋದ್ಯಮಿಗಳು ಉಗ್ರ ರಾಷ್ಟ್ರೀಯತೆಯನ್ನು ಬೆಳೆಸಲು ದೊಡ್ಡ ಪ್ರಮಾಣದಲ್ಲಿ ಹಣ ನೀಡಿದರು.

4.ಜರ್ಮನಿ, ಇಟಲಿಗಳಲ್ಲಿ ಬೆಳೆದ ಸರ್ವಾಧಿಕಾರ.ಎರಡನೇ ಮಹಾಯುದ್ಧದ ಪರಿಣಾಮಗಳಾವುವು?

1. ಮಾನವ ಚರಿತ್ರೆಯಲ್ಲೇ ಅತಿ ಹೆಚ್ಚಿನ ಸಾವು–ನೋವುಗಳನ್ನು ಉಂಟುಮಾಡಿತು.

2.ರಾಷ್ಟ್ರಗಳ ಸಂಘದ ಜಾಗದಲ್ಲಿ ವಿಶ್ವಸಂಸ್ಥೆ ಸ್ಥಾಪನೆಯಾಯಿತು.

3.ರಷ್ಯಾ ಮತ್ತು ಅಮೆರಿಕಾಗಳು ಪರಸ್ಪರ ವಿರೋಧಿಯಾದ ಶಕ್ತಿಶಾಲಿ ದೇಶಗಳಾದವು. ಶೀತಲ ಯುದ್ಧ ಮೊದಲಾಯಿತು.

4.ಏಷ್ಯಾ ಮತ್ತು ಆಫ್ರಿಕಾದ ವಸಾಹತುಗಳು ಸ್ವಾತಂತ್ರ್ಯ ಪಡೆಯಲು ಪೂರಕವಾಯಿತು.

5.ಬ್ರಿಟನ್, ಫ್ರಾನ್ಸ್ ಮುಂತಾದ ದೇಶಗಳು ತಮ್ಮ ಹಿಡಿತದಲ್ಲಿದ್ದ ಬಹುತೇಕ ವಸಾಹತುಗಳನ್ನು ಕಳೆದುಕೊಂಡವು.

12. ಚೀನಾದ ಕಮ್ಯುನಿಸ್ಟ್‌ರ ದೀರ್ಘಯಾತ್ರೆ ಕುರಿತು ಬರೆಯಿರಿ.

ಚೀನಾದಲ್ಲಿ ಷಿಯಾಂಗ್–ಕೈ– ಷೇಕ್ ಅಧಿಕಾರಕ್ಕೆ ಬಂದ ಮೇಲೆ ಸಾಮ್ರಾಜ್ಯಶಾಹಿಗಳ ಜೊತೆ ಸೇರಿ ಕಮ್ಯುನಿಸ್ಟರ ವಿರುದ್ಧ ದಾಳಿ ಮಾಡಿದನು. ಇದರಲ್ಲಿ ಸುಮಾರು 70,000 ಕ್ರಾಂತಿಕಾರಿಗಳು ಕೊಲ್ಲಲ್ಪಟ್ಟರು.ತಮ್ಮನ್ನು ರಕ್ಷಿಸಿಕೊಳ್ಳುವ ಸಲುವಾಗಿ ಮಾವೋತ್ಸೆ–ತುಂಗ್‌ನ ನೇತೃತ್ವದಲ್ಲಿ ಚೀನಾದ ಉತ್ತರ ಭಾಗಕ್ಕೆ ಕ್ರಾಂತಿಕಾರಿಗಳನ್ನು ಸ್ಥಳಾಂತರಿಸಲಾಯಿತು. ಈ ಚಾರಿತ್ರಿಕವಾದ ಸ್ಥಳಾಂತರವನ್ನು ದೀರ್ಘಪಯಣ ಎಂದು ಕರೆಯಲಾಗಿದೆ.

13. ಶೀತಲ ಸಮರ ಎಂದರೇನು?

